ದೆಹಲಿ ಕರ್ನಾಟಕ ಸಂಘದ

# ಅಭಿಮತ

ನವೆಂಬರ್ 2010
ಬೆಲೆ ರೂ. 1.



## ದೀಪಾವಳಿ ಹಬ್ಬದ ಶುಭಾಶಯಗಳು

# ಮನರಂಜಿಸಿದ 'ಪುಣ್ಯಕೋಟಿ' ಗೀತ ನಾಟಕ



ದೇಶದ ರಾಜಧಾನಿಯಲ್ಲಿರುವ ದೆಹಲಿ ಕರ್ನಾಟಕ ಸಂಘದ ರಂಗಮಂಟಪದಲ್ಲಿ ರವಿವಾರ ಅಕ್ಟೋಬರ್ 24,2010ರಂದು ಸಾಯಂಕಾಲ ಬೆಂಗಳೂರಿನ ಸೂರ್ಯ ಕಲಾವಿದರು ತಂಡದಿಂದ ಭರತನಾಟ್ಯ, ದಶಾವತಾರ ಮತ್ತು 'ಪುಣ್ಯಕೋಟಿ' ಗೀತ ನಾಟಕದ ಪ್ರದರ್ಶನ ನಡೆಯಿತು. ಈ ಗೀತನಾಟಕಗಳನ್ನು ನಿರ್ದೇಶಿಸಿದವರು ಬೆಂಗಳೂರಿನ ಸೂರ್ಯ ಕಲಾವಿದರು ತಂಡದ ಶ್ರೀ ಸಂಜಯ್ ಸೂರಿ.



ಆರಂಭದಲ್ಲಿ ಭರತನಾಟ್ಯ ತಂಡದಿಂದ ಭರತ ನಾಟ್ಯವನ್ನು ಪ್ರದರ್ಶಿಸಿ ಕಲಾವಿದರು ಸಭಿಕರನ್ನು ಮನರಂಜಿಸಿದರು. ಆನಂತರ 'ಪಾಪ ಪಾಂಡು' ಧಾರಾವಾಹಿಯಲ್ಲಿ ಗೋಪಿ ಪಾತ್ರ ನಿರ್ವಹಿಸಿ ಪ್ರಸಿದ್ಧಿಗೆ ಬಂದ ವಿಕ್ರಮ ಸೂರಿ ಮತ್ತು 'ಸಿಲ್ಲಿ-ಲಲ್ಲಿ' ಧಾರಾವಾಹಿಯಲ್ಲಿ ಎನ್.ಎಂ.ಎಲ್. ಎಂದೇ ಹೆಸರು ಗಳಿಸಿದ ವಿಕ್ರಮ ಸೂರಿಯವರ ಪತ್ನಿ ನಮಿತಾ ರಾವ್ ಅವರಿಂದ 'ದಶಾವತಾರ'ದ ಹತ್ತು ಮುಖಗಳನ್ನು ಅವರಿಬ್ಬರು ತಮ್ಮ ಕಲಾ ಕೌಶಲ್ಯತೆಯಿಂದ ಜನತೆಗೆ ಮನಮುಟ್ಟುವಂತೆ ಮನರಂಜಿಸಿದರು.

ತದನಂತರ 'ಪುಣ್ಯಕೋಟಿ' ಗೀತ ನಾಟಕದ ಪ್ರದರ್ಶನ. ಪುಣ್ಯಕೋಟಿ ಗೀತ ನಾಟಕ ವೀಕ್ಷೀಸುತ್ತಿರುವಾಗ ಪ್ರಾಥಮಿಕ ಶಾಲೆಯಲ್ಲಿ ಕಲಿತಿರುವ ನೆನಪುಗಳು ಮರುಕಳಿಸಿದವು. ಹಲವಾರು ಹಸುಗಳು, ಹಸುಗಳನ್ನು ಗೊಲ್ಲನು ಮೇಯಿಸಲು ಅಡವಿಗೆ ಹೋಗುವುದು, ಮತ್ತು ಅಡವಿಯಿಂದ ಮರಳಿ ದೊಡ್ಡಿಗೆ ಬರುವಾಗ ಹಸುಗಳ ಗುಂಪಿನಿಂದ ಪುಣ್ಯಕೋಟಿ ಎಂಬ ಗೋವು ತಪ್ಪಿಸಿಕೊಳ್ಳುವದು. ಕಾಡಿನ ರಾಜ ಹುಲಿ ಹೊಟ್ಟೆ ಹಸಿದು ಆಹಾರಕ್ಕಾಗಿ ಹುಡುಕುತ್ತ ಕಾಡಿನ ಗವಿಯಿಂದ ಅಡವಿಗೆ ಧಾವಿಸಿ ಅಲ್ಲಿರುವ ಹಸುವಿನ ಮೇಲೆ ಎರಗಿ ತಿನ್ನಲು ಯತ್ನಿಸುವದು. ಪುಣ್ಯಕೋಟಿಯೆಂಬ ಹಸುವಿಗೆ (ಗೋವು) ಹುಲಿಗೆ ಆಹಾರವಾಗಿ ಸಾಯುವ ಚಿಂತೆಯಿಲ್ಲ. ಆದರೆ ದೊಡ್ಡಿಯಲ್ಲಿರುವ ತನ್ನ ಹಸು ಕೂಸಿಗೆ ಹಾಲು ಉಣಿಸಿ ಮತ್ತೊಮ್ಮೆ ನೋಡಿ ಬರುವ ಆಸೆ. ಆದರೆ ಹಸಿದ ಹುಲಿಗೆ ಹಸುವಿನ ಮೇಲೆ ವಿಶ್ವಾಸವಿಲ್ಲ. ಹುಲಿಯಿಂದ ಎರಗಿದ ಹಸುವಿಗೆ ಸಾಯುವುದಕ್ಕಿಂತ ಮೊದಲು ಎಳೆಯ ಕಂದಮ್ಮನನ್ನು ಕೊನೆಯದಾಗಿ ನೋಡುವ ಆಸೆ. ಹಸು ಹಸಿದ ಹುಲಿಯ ಮನಸ್ಸನ್ನು ಪರಿವರ್ತಿಸಲು ಪರಿಪರಿಯಾಗಿ ಬೇಡಿಕೊಂಡರೂ ಹುಲಿಯ ಮನಸ್ಸು ಪರಿವರ್ತನೆ ಯಾಗುವುದಿಲ್ಲ. ಏಕೆಂದರೆ, ತನ್ನಿಂದ ತಪ್ಪಿಸಿಕೊಂಡು ಮಗುವನ್ನು ನೋಡಲು ಹೋಗುವ ನೆಪಮಾಡಿ ಹಸು ಪರಾಗುವ ತಯಾರಿಯಲ್ಲಿದೆ ಎಂಬ ಸಂಶಯ ಹುಲಿಗೆ. ಹಸುವಿಗೆ ಹುಲಿ ಹೊಟ್ಟೆಗೆ ಆಹಾರವಾಗಿ ಸಾವನ್ನಪ್ಪುವ ಭಯವಿಲ್ಲ. ಆದರೂ ಹಸುಕೂಸನ್ನು ನೋಡುವ ಹಾಗೂ ಹಾಲು ಉಣಿಸುವ ಕೊನೆಯ ಆಸೆ. ಹೀಗಾಗಿ ಹಸು ಹುಲಿ ಎದುರು ಪರಿಪರಿಯಾಗಿ ಬೇಡಿಕೊಂಡು ಹಾಗೂ ಭಾಷೆ ಕೊಟ್ಟು ಹುಲಿಗೆ ಮರಳಿ ಬರುವುದಾಗಿ ಮನವರಿಕೆ ಮಾಡುವುದು.

ಹೀಗೆ ಹುಲಿಗೆ ಮನವರಿಕೆ ಮಾಡಿದ ಪುಣ್ಯಕೋಟಿ ಗೋವು ದೊಡ್ಡಿಯತ್ತ ಬರುವುದು. ತಾಯಿಯ ಬರುವನ್ನೇ ಕಾಯುತ್ತಿರುವ ಹಸುಕೂಸು ತಾಯಿಯ ತೆಕ್ಕೆಗೆ ಅಪ್ಪಳಿಸುವುದು. ತಾಯಿ ಆಕಳು ಎಳೆಯ ಕಂದಮ್ಮನಿಗೆ ಹೊಟ್ಟೆತುಂಬ ಹಾಲು ಕುಡಿಸಿ, ದೊಡ್ಡಿಯಲ್ಲಿರುವ ಇತರ ಹಸುಗಳಿಗೆ ಎಳೆ ಕಂದಮ್ಮನ್ನು ಸರಿಯಾಗಿ ನೋಡಿಕೊಳ್ಳುವಂತೆ ಹೇಳಿ ಪುಣ್ಯಕೋಟಿ ಗೋವು ಹುಲಿಗೆ ಕೊಟ್ಟ ಭಾಷೆಯಂತೆ ಕಾಡಿನತ್ತ ಹೊರಡುವುದು. ಮಗುವಿನಿಂದ ಕಳಚಿಕೊಂಡು ಹೋಗುತ್ತಿರುವ ದೃಶ್ಯ ನೋಡಿದರೆ ಎಲ್ಲರ ಹೃದಯ ಕರಗಿ ಬರುವುದು. ಹಸು ದೊಡ್ಡಿಯಲ್ಲಿರುವ ಇತರ ಹಸುಗಳಿಗೆ ತನ್ನ ಕಂದಮ್ಮನನ್ನು ಕುರಿತು "ಮುಂದೆ ಬಂದರೆ ಹಾಯಬೇಡಿ, ಹಿಂದೆ ಬಂದರೆ ಒದೆಯಬೇಡಿ" ಎಂದು ಪರಿಪರಿಯಾಗಿ ಹೇಳುವ ದೃಶ್ಯ ನಿಜಕ್ಕೂ ವೀಕ್ಷಕರ ಕಣ್ಣಲ್ಲಿ ನೀರು ತರಿಸಿತು. ಈ ರೀತಿಯಾಗಿ ಮಗುವನ್ನು ತಬ್ಬಲಿಯಾಗಿ ದೊಡ್ಡಿಯಲ್ಲಿ ಬಿಟ್ಟು ಪುಣ್ಯಕೋಟಿ ಗೋವು ಹುಲಿಯ ಆಹಾರಕ್ಕಾಗಿ ಆಹುತಿಯಾಗಲು ಕಾಡಿನತ್ತ ಹೊರಡುವುದು. ಹಸುವಿನ ಬರುವಿಕೆಗಾಗಿ ಗವಿಯ ಮೇಲೇರಿ ಕಾಯುತ್ತಿರುವ ಹುಲಿ ಹಸುವಿನ ಪ್ರಾಮಾಣಿಕತೆಯನ್ನು ನೋಡಿ ಹೌಹಾರಿತು. ಮನನೊಂದ ಹಸಿದ ಹುಲಿ ಹಸುವನ್ನು ಅಹಾರವಾಗಿ ತಿನ್ನುವ ಬದಲು ಕಾಡಿನ ಬೆಟ್ಟದಿಂದ ಜಿಗಿದು ಸಾವನ್ನಪ್ಪುವುದು. ಈ ಗೀತ ನಾಟಕದಲ್ಲಿ ಪುಣ್ಯಕೋಟಿ ಗೋವು ಪಾತ್ರವಾಗಿ ಅಭಿನಯಿಸಿದ ಕಲಾವಿದೆ ನಮಿತಾ ರಾವ್ ಹಾಗು ಎಲ್ಲಾ ಪಾತ್ರಧಾರಿಗಳು 'ಪುಣ್ಯಕೋಟಿ' ಗೀತ ನಾಟಕದಲ್ಲಿ ಸುಂದರವಾಗಿ ಅಭಿನಯಿಸಿದರು.

ಅಂತಿಮವಾಗಿ ಎಲ್ಲಾ ಕಲಾವಿದರನ್ನು ರಂಗಮಂಟಪದಲ್ಲಿ ಕರೆಯಿಸಿ ಪ್ರೇಕ್ಷಕರಿಗೆ ಪರಿಚಯಿಸಲಾಯಿತು. ಸಂಘದ ಕಾರ್ಯಾಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆಯವರು ಸುಪ್ರಸಿದ್ಧ ನಟ, ನಿರ್ದೇಶಕರಾದ ಸಂಜಯ್ ಸೂರಿ ಕಲಾವಿದರಾದ ವಿಕ್ರಮ ಸೂರಿ ಹಾಗೂ ನಮಿತಾ ರಾವ್ ಅವರಿಗೆ ಸಂಘದ ನೆನಪಿನ ಕಾಣಿಕೆಯನ್ನು ನೀಡಿ ಗೌರವಿಸಿದರು. ಉಳಿದ ಕಲಾವಿದರಿಗೂ ಪುಷ್ಪಗುಚ್ಛವನ್ನು ನೀಡಿ ಗೌರವಿಸಲಾಯಿತು. 'ಪುಣ್ಯಕೋಟಿ' ಗೀತ ನಾಟಕದ ಪದ್ಯವನ್ನು ರಚಿಸಿದವರು ಯಾರೂ ಎಂಬುದು ಇಂದಿಗೂ ಗೊತ್ತಿಲ್ಲ. ಆದರೆ ಈ ಪ್ರದರ್ಶನದಿಂದ ತಿಳಿದು ಬರುವುದೇನೆಂದರೆ, ಸತ್ಯ ಮತ್ತು ಪ್ರಾಮಾಣಿಕತೆಗೆ ಮನುಷ್ಯರಂತೆ ಕ್ರೂರ ಪ್ರಾಣಿಗಳಲ್ಲೂ ಸಹ ದಯಾ ಗುಣ ಹುಟ್ಟುವದು ಎಂಬುದು.





**ಪ್ರಧಾನ ಸಂಪಾದಕರು**
ವಸಂತ ಶೆಟ್ಟಿ ಬೆಳ್ಳಾರೆ

**ಸಂಪಾದಕ ಮಂಡಳಿ**
ಮಹಾಬಲೇಶ್ವರ ಭಟ್ ಕೆ.
ಸಂತೋಷ್ ಕುಮಾರ್ ಉಪಾಧ್ಯಾಯ
ಡಾ. ಸುಮಂಗಲಾದೇವಿ
ನಂದಿನಿ ಮಲ್ಯ
ಸಾಮ್ರಾಟ್ ಗೌಡ
ಸರೋಜಾ ವಿಜಯಕುಮಾರ್

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**
**ಅಧ್ಯಕ್ಷರು**
ಸಿ.ವಿ. ಗೋಪಿನಾಥ್

**ಉಪಾಧ್ಯಕ್ಷರು**
ವಸಂತ ಶೆಟ್ಟಿ ಬೆಳ್ಳಾರೆ
ಉಷಾ ಭರತಾದ್ರಿ

**ಪ್ರಧಾನ ಕಾರ್ಯದರ್ಶಿ**
ಆರ್. ರೇಣುಕುಮಾರ್

**ಖಜಾಂಚಿ**
ಎಂ.ವಿ. ವೆಂಕಟೇಶ್

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ಡಾ. ಹೇಮಲತಾ ಮೂರ್ತಿ

**ಸಮಿತಿ ಸದಸ್ಯರು**
ಅಂಜನಿ ಗೌಡ
ಹರಿಶ್ಚಂದ್ರ ಬಂಟ್ವಾಳ್
ಟಿ.ಎಂ. ಮೈಲಾರಪ್ಪ
ವಿ.ವಿ. ಬಿರಾದಾರ
ಸಿ.ಆರ್. ಶ್ರೀನಿವಾಸ
ಕೆ.ಎಸ್.ಜಿ. ಶೆಟ್ಟಿ
ರಾಧಾಕೃಷ್ಣ
ಭಂಡಾರ್‌ಕರ್ ಎಸ್.ಎಲ್
ಇಸ್ಮಾಯಿಲ್ ಬುಡಂದಿ
ಬಿ.ಆರ್.ಮಹಾಲಿಂಗಪ್ಪ

**DELHI KARNATAKA SANGHA**
Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com

ಅಭಿಮತ
ಸಂಪುಟ 21 ಸಂಚಿಕೆ 2
ನವೆಂಬರ್ 2010, ಬೆಲೆ ರೂ. 1

## ನಿಮ್ಮೊಂದಿಗೆ

ಹಿಂದಿನ ಸಂಚಿಕೆಯಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ಹಾಗೂ ಅದಕ್ಕೆ ಎದುರಾಗಿದ್ದ ಸಮಸ್ಯೆಗಳ ಬಗ್ಗೆ ನಿಮ್ಮೊಂದಿಗೆ ಹಂಚಿಕೊಂಡಿದ್ದೆ. ಎಲ್ಲವೂ ಒಳ್ಳೆಯ ರೀತಿಯಿಂದ ನಡೆದು ಭಾರತ ತನ್ನ ಹೆಸರನ್ನು ಉಳಿಸಿಕೊಂಡಿದೆಯಲ್ಲದೆ ಒಟ್ಟು 101 ಪದಕಗಳನ್ನು ತನ್ನದಾಗಿಸಿಕೊಂಡಿದೆ. ಅದರಲ್ಲಿ 10 ಪದಕಗಳನ್ನು ಕರ್ನಾಟಕದ ಕ್ರೀಡಾಳುಗಳು ಗೆದ್ದು ಕರ್ನಾಟಕಕ್ಕೆ ಗೌರವ ತಂದಿದ್ದಾರೆ. ಅಶ್ವಿನಿ ಸಿ. ಅಕ್ಕುಂಜಿ (ಮಹಿಳೆಯರ ರಿಲೇ) ಬಂಗಾರದ ಪದಕ, ಅಶ್ವಿನಿ ಪೊನ್ನಪ್ಪ (ಬ್ಯಾಡ್‌ಮಿಟನ್ ಡಬಲ್ಸ್) ಬಂಗಾರದ ಪದಕ, ವಿಕಾಸ ಗೌಡ (ಡಿಸ್ಕಸ್ ಥ್ರೋ) ಬೆಳ್ಳಿಯ ಪದಕ, ಕಾಶೀನಾಥ ನಾಯ್ಕ್ (ಜಾವೆಲಿನ್ ಥ್ರೋ) ಬೆಳ್ಳಿಯ ಪದಕ, ಜಿ.ಬಿ.ನಾಗರಾಜ (ಪುರುಷರ ರಿಲೇ) ಕಂಚಿನ ಪದಕ, ಎಚ್.ಎಂ.ಜ್ಯೋತಿ (ಮಹಿಳೆಯರ ರಿಲೇ) ಕಂಚಿನ ಪದಕ, ಭರತ್ ಚೆಟ್ರಿ, ಅರ್ಜುನ್ ಹಾಲಪ್ಪ (ಹಾಕಿ) ಬೆಳ್ಳಿಯ ಪದಕ ಹಾಗೂ ಸುಧೀರ್ ಕುಮಾರ್ (ವೆಯಿಟ್ ಲಿಫ್ಟಿಂಗ್) ಕಂಚಿನ ಪದಕ ಇವರುಗಳೇ ಆ ಮಹಾ ಕ್ರೀಡಾಪಟುಗಳು. ಇವರುಗಳಿಗೆ ದೆಹಲಿ ಕನ್ನಡಿಗರ ಅಭಿನಂದನೆಗಳು.

ಸಂಘದ ಸದಸ್ಯರಾಗಿರುವ ಹಾಗೂ ದೆಹಲಿ ಕನ್ನಡಿಗರಿಗೆ ಪರಿಚಿತರಾಗಿರುವ ಶ್ರೀ ಬೋಳುವಾರು ಮಹಮ್ಮದ್ ಕುಂಞ ಅವರಿಗೆ ಈ ಬಾರಿಯ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿರುವುದು ದೆಹಲಿ ಕನ್ನಡಿಗರಿಗೆ ಸಂತೋಷವನ್ನುಂಟು ಮಾಡಿದೆ.

ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಹೊರನಾಡ ಕನ್ನಡಿಗರಾದ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಶ್ರೀ ಅಗ್ರಹಾರ ಕೃಷ್ಣಮೂರ್ತಿ, ದೆಹಲಿ ವಾರ್ತೆ ಪತ್ರಿಕೆಯ ಶ್ರೀ ಕೆ.ಆರ್.ರೇಣು ಹಾಗೂ ಮಾಧ್ಯಮದ ಶ್ರೀ ಎ.ಸೂರ್ಯಪ್ರಕಾಶ್ ಅವರಿಗೆ ಬಂದಿರುವುದು ಅಭಿನಂದನೀಯ. ಅವರಿಗೆ ದೆಹಲಿ ಕನ್ನಡಿಗರ ಶುಭ ಹಾರೈಕೆಗಳು.

ಕರ್ನಾಟಕ ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಹತ್ತು ಹಲವು ಪ್ರಶಸ್ತಿಗಳು ಕನ್ನಡಿಗರಿಗೆ ಸಂದಿದೆ. ಅದರಲ್ಲೂ ಪ್ರಥಮ ಬಾರಿಗೆ ದೆಹಲಿಯ ಮೂವರು ಕನ್ನಡಿಗರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿದೆ ಯಾರಾದರೂ ಇನ್ನೂ ಹಲವು ದೆಹಲಿಯ ಕನ್ನಡದ ಹಿರಿಯ ಚೇತನಗಳು ರಾಜ್ಯೋತ್ಸವ ಪ್ರಶಸಿಯಿಂದ ವಂಚಿತರಾಗಿದ್ದಾರೆ. ಮಾತ್ರವಲ್ಲ ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿ ಎಂದೋ ಬರಬೇಕಾಗಿದ್ದ ದೆಹಲಿಯ ಹಿರಿಯ ಕನ್ನಡಿಗರನ್ನು ಗುರುತಿಸುವ ಕಾರ್ಯ ಇನ್ನೂ ಕೈಗೊಂಡಿಲ್ಲ. ರಾಜಧಾನಿಯಲ್ಲೇ ಬೀಡು ಬಿಟ್ಟು ಎಲ್ಲಾ ಕೆಲಸಗಳನ್ನು ಮಾಡಿಸಿಕೊಳ್ಳುವ ನಮ್ಮ ರಾಜಕಾರಣಿಗಳು ಈ ಬಗ್ಗೆ ಗಮನ ಹರಿಸಬೇಕಾಗಿದೆ.

ದೀಪಗಳ ಹಬ್ಬ ದೀಪಾವಳಿ ಜೊತೆಗೆ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು ತಮಗೆಲ್ಲರಿಗೂ ಬೆಳಕನ್ನು ನೀಡಲಿ.

▶ **ವಸಂತ ಶೆಟ್ಟಿ ಬೆಳ್ಳಾರೆ**
ಸಂಪಾದಕರು

# ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದೆಹಲಿ ಕನ್ನಡಿಗರು




2010ನೇ ಸಾಲಿನ ಹೊರನಾಡ ಕನ್ನಡಿಗ-ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿ ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರು ಭಾಜನರಾಗಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿನ ಅವರ ಗಣನೀಯ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರಕಾರ ಪ್ರಶಸ್ತಿಯನ್ನು ನೀಡಿದೆ. ಶ್ರೀ ಕೃಷ್ಣಮೂರ್ತಿಯವರು ತುಮಕೂರಿನ ಅಗ್ರಹಾರ ಹಳ್ಳಿಯವರು. ಅವರ ಕಾದಂಬರಿ 'ನೀರು ಮತ್ತು ಪ್ರೀತಿ' (2001) ಇದು ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಧನ್ಯ (2006), ಬೆಳದಿಂಗಳಪ್ಪನ ಪೂಜೆ (ಜಾನಪದ ಅಭ್ಯಾಸ 1976, 1998), ಬಹುವಚನ (ಸಾಹಿತ್ಯ ಮತ್ತು ಸಂಸ್ಕೃತಿಯ ಮೇಲಿನ ಬರಹ-2006) ಹೀಗೆ ಅನೇಕ ಕೃತಿಗಳನ್ನು ಬರೆದಿದ್ದಾರೆ. ಅವರು ಮಲೆಯಾಳಂ, ಉರ್ದು, ತಮಿಳು ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಇವರಿಗೆ ಈಗಾಗಲೇ ಅವರ 'ನೀರು ಮತ್ತು ಪ್ರೀತಿ' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಇವರು ದೆಹಲಿ ಕನ್ನಡಿಗರಿಗೆ ತುಂಬಾ ಹತ್ತಿರದವರು. ಶ್ರೀ ಕೃಷ್ಣಮೂರ್ತಿಯವರಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ ಬಂದ ಸಂದರ್ಭದಲ್ಲಿ ಅವರಿಗೆ ದೆಹಲಿ ಕನ್ನಡಿಗರ ಹಾರ್ದಿಕ ಶುಭಾಶಯಗಳು.



ದೆಹಲಿಯ ಏಕೈಕ ಕನ್ನಡ ದಿನಪತ್ರಿಕೆ 'ದೆಹಲಿ ವಾರ್ತೆ' ಸಂಪಾದಕ ಶ್ರೀ ಕೆ.ಆರ್.ರೇಣು ಅವರಿಗೆ 2010ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದೆ. ದೆಹಲಿಯಲ್ಲಿ ಪ್ರಪ್ರಥಮವಾಗಿ 2003ರಲ್ಲಿ ಪ್ರಾರಂಭಗೊಂಡ ಈ ಪತ್ರಿಕೆ ದಿನೇ ದಿನೇ ಉತ್ತಮಗೊಳ್ಳುತ್ತಾ ಉತ್ತಮ ಪತ್ರಿಕೆ ಎನ್ನಿಸಿಕೊಂಡು ರಾಜ್ಯೋತ್ಸವ ಪ್ರಶಸ್ತಿಗೆ ಭಾಜನವಾಗಿದೆ. ದೆಹಲಿಯ ಕನ್ನಡಿಗರಿಗೆ ದಿನನಿತ್ಯದ ಕರ್ನಾಟಕದ ವಿದ್ಯಮಾನಗಳನ್ನು ತಿಳಿಸುತ್ತಿರುವ ಈ ಪತ್ರಿಕೆ ದೆಹಲಿಯ ಕನ್ನಡಿಗರ ಮನ-ಮನಗಳನ್ನು ಹಾಗೂ ಮನೆ ಮನೆಯನ್ನು ತಲುಪುತ್ತಿದೆ. ಕರ್ನಾಟಕದ ಚಟುವಟಿಕೆಗಳು ಮಾತ್ರವಲ್ಲದೇ ದೆಹಲಿಯ ಕನ್ನಡಿಗರ ಚಟುವಟಿಕೆಗಳನ್ನು ಕೂಡಾ ಪ್ರಕಟಿಸುತ್ತಾ ಕನ್ನಡದ ಕಲೆ, ಸಂಸ್ಕೃತಿಯ ಬೆಳವಣಿಗೆಗೆ ಪ್ರೋತ್ಸಾಹಿಸುತ್ತಾ ಬಂದಿದೆ. ಹೊರನಾಡಿನಲ್ಲಿ ಇಂಥದೊಂದು ಕಾರ್ಯವನ್ನು ಯಶಸ್ವಿಯಾಗಿ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಶ್ರೀ ಕೆ.ಆರ್. ರೇಣು ಅವರ ಸಾಧನೆಗೆ ರಾಜ್ಯೋತ್ಸವ ಪ್ರಶಸ್ತಿಯ ಮನ್ನಣೆ ದೊರೆತಿರುವುದು ದೆಹಲಿಯ ಕನ್ನಡಿಗರಿಗೆ ತುಂಬಾ ಸಂತೋಷವನ್ನು ನೀಡಿದೆ. ದೆಹಲಿ ವಾರ್ತೆ ಪತ್ರಿಕೆ ಇನ್ನೂ ಉತ್ತಮಮಟ್ಟಕ್ಕೆ ಬೆಳೆಯಲಿ ಹಾಗೂ ಸಂಪಾದಕ ಶ್ರೀ ಕೆ.ಆರ್. ರೇಣು ಅವರಿಗೆ ಇನ್ನೂ ಹೆಚ್ಚಿನ ಪುರಸ್ಕಾರಗಳು ಲಭಿಸಲಿ ಎಂದು ದೆಹಲಿ ಕನ್ನಡಿಗರ ಪರವಾಗಿ ಅಭಿಮತ ಶುಭವನ್ನು ಕೋರುತ್ತದೆ.

ಎ.ಸೂರ್ಯಪ್ರಕಾಶ್ ಅವರಿಗೆ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಅವರ ಮಾಧ್ಯಮ ಕ್ಷೇತ್ರದಲ್ಲಿನ ಸಾಧನೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರ ನೀಡಿದೆ. ಸೂರ್ಯಪ್ರಕಾಶ್ ಹಾಸನ ಜಿಲ್ಲೆಯ ಅರಕಲಗೂಡಿನವರು. ಇವರು ಬರಹಗಾರ ಮತ್ತು ಭಾರತದ ರಾಜಕೀಯ, ಸಂವಿಧಾನ ಮತ್ತು ಸಂಸತ್ತಿಗೆ ಸಂಬಂಧಿಸಿದ ವಿಷಯಗಳ ಮೇಲೆ ಅಧಿಕಾರಯುತವಾಗಿ ಮಾತನಾಡಬಲ್ಲ ಪ್ರತಿಭಾವಂತರು. 1971ರಲ್ಲಿ ಬೆಂಗಳೂರಿನಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಕರಸ್ಪಾಂಡೆಂಟ್ ಆಗಿ ತಮ್ಮ ಪತ್ರಿಕಾ ವೃತ್ತಿಯನ್ನು ಆರಂಭಿಸಿದರು. ವೈಚಾರಿಕ ಪತ್ರಿಕಾ ವೃತ್ತಿಯಲ್ಲಿ ಪಳಗಿದ ನಂತರ ಮತ್ತು ಪತ್ರಿಕಾ ಕ್ಷೇತ್ರದ ಸಂಘ ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡ ಶ್ರೀ ಸೂರ್ಯಪ್ರಕಾಶ್ 1981ರಲ್ಲಿ ದೆಹಲಿಗೆ ಆಗಮಿಸಿದ್ದರು. ರಾಷ್ಟ್ರದ ರಾಜಧಾನಿಗೆ ಅವರ ಆಗಮನದಿಂದ ಅವರ ಪತ್ರಿಕಾ ವೃತ್ತಿ ವಿಶಾಲವಾಗಿ ಬೆಳೆಯಿತು ಹಾಗೂ ಅವರಿಗೆ ಸಂಸತ್ತು ಮತ್ತು ಇತರ ರಾಷ್ಟ್ರೀಯ ಸಂಸ್ಥೆಗಳಲ್ಲಿ ಅಗ್ರಸ್ಥಾನ ದೊರೆಯಿತು. ಅವರು ಪ್ರಿಂಟ್ ಮತ್ತು ಎಲೆಕ್ಟ್ರಾನಿಕ್ ಮೀಡಿಯಾಗಳಲ್ಲಿ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಝೀ ನ್ಯೂಸ್, ಪಯೋನಿಯರ್, ಈನಾಡು ಗ್ರೂಪ್ ಆಫ್ ನ್ಯೂಸ್ ಪೇಪರ್ ಸಂಪಾದಕರಾಗಿ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್‌ನ ಚೀಫ್ ಆಫ್ ಬ್ಯೂರೋ ಆಗಿ ಕೆಲಸ ನಿರ್ವಹಿಸಿದ್ದಾರೆ. ಇವರು ದೆಹಲಿಯ ಪಯೋನಿಯರ್ ಮೀಡಿಯಾ ಸ್ಕೂಲ್‌ನ ಸಂಸ್ಥಾಪಕ ನಿರ್ದೇಶಕರು ಕೂಡಾ. ಇವರು ಪತ್ರಿಕಾ ವಲಯಕ್ಕೆ ಸಂಬಂಧಿಸಿದ ಹಾಗೆ ಅನೇಕ ಕೃತಿಗಳನ್ನು ಬರೆದಿದ್ದಾರೆ.



ಈಗಾಗಲೇ ಇವರಿಗೆ ಅನೇಕ ಪ್ರಶಸ್ತಿಗಳು ಬಂದಿವೆ. ರಾಜ್ಯೋತ್ಸವ ಪ್ರಶಸ್ತಿ ದೊರೆತ ಈ ಸಂದರ್ಭದಲ್ಲಿ ಶ್ರೀ ಸೂರ್ಯಪ್ರಕಾಶ್ ಅವರಿಗೆ ಇನ್ನೂ ಹೆಚ್ಚಿನ ಪ್ರಶಸ್ತಿಗಳು ಅವರನ್ನು ಅರಸಿ ಬರಲಿ ಎಂಬ ಆಶಯದೊಂದಿಗೆ ದೆಹಲಿ ಕನ್ನಡಿಗರ ಅಭಿನಂದನೆಗಳು.

**ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು**

# ದೆಹಲಿ ಕರ್ನಾಟಕ ಸಂಘ

## ಅಭಿನಂದನೆ

ದಿನಾಂಕ : 16.11.2010, ಸಂಜೆ 6.30

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ

**ಶ್ರೀ ಬೊಳುವಾರು ಮಹಮ್ಮದ ಕುಂಞ**

ಅವರಿಗೆ

**ಅಭಿನಂದನೆ**

ಮತ್ತು

**'ಪಾಪು ಗಾಂಧಿ, ಗಾಂಧಿ ಪಾಪು ಆದ ಕತೆ'**

ಕುರಿತು ಒಂದು ಸಂವಾದ

## ಸಾಹಿತ್ಯ ಸಂಜೆ

ದಿನಾಂಕ : 21.11.2010

ಸಮಯ : ಸಂಜೆ 4 ಗಂಟೆಗೆ

ಕನ್ನಡ ವಿಶ್ವವಿದ್ಯಾಲಯದ ಡಾ. ರಾಜ್‌ಕುಮಾರ್ ಅಧ್ಯಯನ ಪೀಠದ ನಿರ್ದೇಶಕರು ಹಾಗೂ ಕನ್ನಡದ ಪ್ರಖ್ಯಾತ ಕಥೆಗಾರರು ಆಗಿರುವ

**ಡಾ. ಮೊಗಳ್ಳಿ ಗಣೇಶ**

ಅವರು

ಕರ್ನಾಟಕದ ಅವ್ಯಕ್ತ ಚರಿತ್ರೆಯ ಕುರಿತು ಸಾಹಿತ್ಯ ಸಂಜೆಯಲ್ಲಿ ಮಾತನಾಡಲಿರುವರು

**ತಮಗೆಲ್ಲರಿಗೂ ಆದರದ ಸ್ವಾಗತ**

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ದೆಹಲಿ ಕರ್ನಾಟಕ ಸಂಘ

## "ಕರ್ನಾಟಕ ರಾಜ್ಯೋತ್ಸವ"

ದಿನಾಂಕ 28.11.2010, ಸಮಯ: ಸಂಜೆ 4.00 ರಿಂದ

ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ

ವಿದ್ಯಾರ್ಥಿ ವೇತನ ವಿತರಣೆ

ಹಾಗೂ

ಸಾಂಸ್ಕೃತಿಕ ಕಾರ್ಯಕ್ರಮಗಳು

**ತಮಗೆಲ್ಲರಿಗೂ ಆದರದ ಸ್ವಾಗತ**

ಸಿ ವಿ. ಗೋಪಿನಾಥ್
ಅಧ್ಯಕ್ಷರು

ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

# ಭಸ್ಮಾಸುರ ಮೋಹಿನಿ







ಇದೇ ಅಕ್ಟೋಬರ್ 5 ರಂದು ಮಂಗಳೂರಿನ ಯಕ್ಷಮಂಜೂಷ, ಯಕ್ಷಗಾನ ತಂಡವು 'ಭಸ್ಮಾಸುರ ಮೋಹಿನಿ' ಎಂಬ ಯಕ್ಷಗಾನ ಕಥಾ ಪ್ರಸಂಗವನ್ನು ಪ್ರದರ್ಶಿಸಿತು. ಉತ್ತಮವಾದ ಹಿಮ್ಮೇಳ ಮತ್ತು ಮುಮ್ಮೇಳಗಳಿಂದ ಯಕ್ಷಗಾನ ಅತ್ಯಂತ ಚೆನ್ನಾಗಿ ಮೂಡಿ ಬಂದು ಪ್ರೇಕ್ಷಕರ ಮನಸೂರೆಗೊಂಡಿತು. ಎಲ್ಲಾ ಪಾತ್ರಗಳೂ ಹಿತಮಿತವಾಗಿ ಮೂಡಿಬಂದವು. ಕಥೆ ಪೌರಾಣಿಕವಾಗಿದ್ದರೂ ವರ್ತಮಾನದಲ್ಲಿ ನಡೆಯುತ್ತಿರುವ, ಆಧುನಿಕತೆ ಎಂದು ಕರೆಯಿಸಿಕೊಳ್ಳುತ್ತಿರುವ ಪ್ರಗತಿಯ ಮುಖವಾಡಗಳಾಗುತ್ತಿರುವ ನಗರೀಕರಣ, ಔದ್ಯೋಗೀಕರಣಗಳು ಯಾವ ರೀತಿ ನಮ್ಮನ್ನೇ ಸ್ವಾಹಾ ಮಾಡಲು ಸಿದ್ಧವಾಗುತ್ತಿರುವ ಭಸ್ಮಾಸುರಗಳಾಗುತ್ತಿವೆ ಎಂಬುದನ್ನು ಸ್ಮರಿಸುವಂತೆ ಮಾಡಿತು.

## ಮುನ್ನೋಟ

ಪ್ರಸ್ತುತ ಕಾರ್ಯಕಾರಿ ಸಮಿತಿಯ ಅವಧಿ ಇದೇ ತಿಂಗಳು ಪೂರ್ಣಗೊಳ್ಳಲಿದೆ. 2010-12ರ ಅವಧಿಗಾಗಿ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಬೇಕಿದೆ.. ಈ ನಿಟ್ಟಿನಲ್ಲಿ ಕಾರ್ಯನಿರ "ತವಾಗಬೇಕಿದೆ.

ಏತನ್ಮಧ್ಯೆ ದಸರಾ, ದೀಪಾವಳಿ ಹಬ್ಬಗಳೊಂದಿಗೆ ನಾಡಹಬ್ಬ ರಾಜ್ಯೋತ್ಸವ ಸಹ ಮುಗಿದಿದೆ. ಹಬ್ಬದ ವಾತಾವರಣ ಮನತುಂಬಿಗೊಂಡಿದೆ. ಸಾಂಕೇತಿಕ ಪೂಜೆ, ಧ್ವಜಾರೋಹಣದೊಂದಿಗೆ ನಡೆದ ರಾಜ್ಯೋತ್ಸವ ಕಾರ್ಯಕ್ರಮದ ಪರಿಪೂರ್ಣ ಕಾರ್ಯಕ್ರಮ ಇದೇ ತಿಂಗಳ 28ರಂದು ನಡೆಯಲಿದೆ. ದಯಮಾಡಿ ಆಗಮಿಸಿ, ಆನಂದಿಸಿ.

■ ಆರ್.ರೇಣುಕುಮಾರ್
ಪ್ರಧಾನ ಕಾರ್ಯದರ್ಶಿ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್ (ರಿ)

## 30ನೇ ವಾರ್ಷಿಕೋತ್ಸವ ಸಮಾರಂಭ

ದಿನಾಂಕ : ಡಿಸೆಂಬರ್ 5, 2010
ಸಮಯ : ಸಂಜೆ 4 ರಿಂದ
ಸ್ಥಳ : ದೆಹಲಿ ಕರ್ನಾಟಕ ಸಂಘದ ಸಭಾಂಗಣ
"ನಾಡು ನುಡಿ ನಡೆಯಲ್ಲಿ ಸಮ್ಮಾನವಿರಲಿ"
ಮನವಿದ್ದಲ್ಲಿ ಮಾರ್ಗವುಂಟೆಂಬ ನಲ್ನುಡಿ ಬದುಕಿಗಿರಲಿ" ॥

**ಸಮಾರಂಭದ ಮುಖ್ಯ ಅತಿಥಿ**
ಪದ್ಮಶ್ರೀ ಶ್ರೀಮತಿ ಗೀತಾಚಂದ್ರನ್
ಭರತನಾಟ್ಯ ಕಲಾವಿದೆ – 'ನಾಟ್ಯ ವೃಕ್ಷ ಅಕಾಡೆಮಿ ನಿರ್ದೇಶಕಿ'

**ಸಮಾರಂಭದ ಅಧ್ಯಕ್ಷತೆ ವಹಿಸುವವರು**
ಕನ್ನಡ ದೂರದರ್ಶನ ಮತ್ತು ಚಲನಚಿತ್ರದ ಪ್ರಸಿದ್ಧ ನಟಿ
ಶ್ರೀಮತಿ ಗಿರಿಜಾ ಲೋಕೇಶ್

**ವಿಶೇಷ ಆಕರ್ಷಣೆ**
ಕನ್ನಡ ಹಾಸ್ಯಗಾತಿಯರು –ಸುಧಾ ಬರಗೂರು ಮತ್ತು ಅರುಂಧತಿ ಸಾಲಿಮಠ
ಅವರಿಂದ ಹಾಸ್ಯ ಸಂಜೆ
ಎಲ್ಲರಿಗೂ ಸುಸ್ವಾಗತ
ಬನ್ನಿ ಎಲ್ಲರೂ ಸೇರಿ ನಕ್ಕು ನಗೆಗಡಲಲ್ಲಿ ತೇಲೋಣ

**ರಂಗಮಣಿ ರಾವ್**
ಅಧ್ಯಕ್ಷಣಿ

**ಸುಷ್ಮಾ ಬಿಢೆ**
ಕಾರ್ಯದರ್ಶಿಣಿ

# ಮನ ಪರಿವರ್ತಿಸಿದ ವಾಲಿಮೋಕ್ಷ

ದಿನಾಂಕ 12.10.2010ರಂದು ಸಾಯಂಕಾಲ ಸಂಘದ ಸಭಾಂಗಣದಲ್ಲಿ 'ವಾಲಿ ಮೋಕ್ಷ' ಎಂಬ ಯಕ್ಷಗಾನವು "ಇಂಡಗುಂಜಿ" ಯಕ್ಷಗಾನ ಮಂಡಳಿಯವರಿಂದ ಪ್ರದರ್ಶನಗೊಂಡಿತು.

ಎಲ್ಲರಿಗೂ ತಿಳಿದಿರುವಂತೆ ವಾಲಿ ಮತ್ತು ಸುಗ್ರೀವ ಒಡಹುಟ್ಟಿದ ಅಣ್ಣ ತಮ್ಮಂದಿರು. ಸುಗ್ರೀವನ ಹೆಂಡತಿಯನ್ನು 'ವಾಲಿ' ತನ್ನಲ್ಲಿ ಇಟ್ಟುಕೊಂಡು ಸುಗ್ರೀವನನ್ನು ಊರಾಚೆ ಕಳಿಸಿ ರಾಜ್ಯದಲ್ಲಿಯ ಭಾಗವನ್ನು ಕೊಡದೆ, ಅನ್ಯಾಯ ಮಾಡಿದಾಗ, ಹನುಮಂತನು ನ್ಯಾಯವಂತವಾದ ಸುಗ್ರೀವನಿಗೆ ಬಂಟನಾಗಿ ಅವನಿಗೆ ಸಹಕಾರ ಕೊಟ್ಟಂತಹ ವಿಷಯ.

ರಾಮ, ಲಕ್ಷ್ಮಣ ಹಾಗೂ ಸೀತೆಯರು 14 ವರ್ಷ ವನವಾಸ ಮಾಡುವ ಕೊನೆಯ ಹಂತದಲ್ಲಿ ರಾವಣನು ಸೀತೆಯನ್ನು ಅಪಹರಿಸಿಕೊಂಡು ಹೋದಾಗ, ಸೀತೆಯ ಅನ್ವೇಷಣೆಯನ್ನು ಮಾಡುತ್ತಾ ರಾಮ, ಲಕ್ಷ್ಮಣರು ಕಿಷ್ಕಿಂದೆಯವರೆಗೆ ಬಂದು ಪರ್ವತದ ಸಮೀಪ ವಿಹರಿಸುತ್ತಿದ್ದನ್ನು ಕಂಡು ಅವರ್‍ಯಾರು ಎಂದು ತಿಳಿಯಲು ಹನುಮಂತನನ್ನು ಬ್ರಾಹ್ಮಣನ ವೇಷದಲ್ಲಿ ಅವರ ಬಳಿಗೆ ಕಳುಹಿಸಿ ಅವರ ಪರಿಚಯ ತಿಳಿದಾಗ ಹನುಮ ತನ್ನ ಭುಜಗಳ ಮೇಲೆ ಇಬ್ಬರನ್ನೂ ಕೂಡ್ರಿಸಿಕೊಂಡು ಋಷ್ಯಶೃಂಗ ಪರ್ವತದ ತುತ್ತತುದಿಗೆ ಸುಗ್ರೀವನಲ್ಲಿಗೆ ಕರೆದುಕೊಂಡು ಹೋಗುತ್ತಾನೆ. ಅವರ ವ್ಯಥೆಯ ಕಥೆ ಕೇಳಿ ರಾಮನು ಸುಗ್ರೀವನ ಮಡದಿ ರುಮೆಯನ್ನು ವಾಲಿಯಿಂದ ಬಿಡಿಸಿ, ರಾಜ್ಯವನ್ನು ಕೊಡಿಸಿ ನ್ಯಾಯ ಒದಗಿಸುವುದಾಗಿ ಭಾಷೆ ಕೊಡುತ್ತಾನೆ. ಸುಗ್ರೀವನು ವಾನರ ಸೇನೆಯ ಸಹಾಯಕೊಟ್ಟು ಸೀತೆಯನ್ನು ಹುಡುಕಿ ರಾಮನಿಗೆ ಒಪ್ಪಿಸುವ ವಚನ ನೀಡುತ್ತಾನೆ. ಇದು ಒಂದು ಒಪ್ಪಂದ ಅಲ್ಲ,ಇದು ನ್ಯಾಯಕ್ಕಾಗಿ ಕ್ಷತ್ರಿಯ ಮಾಡುವ ಕರ್ತವ್ಯ ಎಂದು ಹೇಳುತ್ತಾನೆ. ಆಗ ಸುಗ್ರೀವ'ನು ತನ್ನ ಅಣ್ಣನ ಪರಾಕ್ರಮ, ಶಕ್ತಿ ಎಲ್ಲ ವರ್ಣನೆ ಮಾಡಿದಾಗ, ರಾಮನು ಕೂಡಾ ತನ್ನ ಶಕ್ತಿ ತೋರಿಸುತ್ತಾನೆ. ಆ ಭರವಸೆಯಿಂದ ಸುಗ್ರೀವ ಅಣ್ಣನನ್ನು ದ್ವಂದ ಯುದ್ದಕ್ಕಾಗಿ ಆಹ್ವಾನಿಸುತ್ತಾನೆ. ಅದರಲ್ಲಿ ಸೋಲು ಅನುಭವಿಸಿದಾಗ ರಾಮನು ಇಬ್ಬರೂ ಒಂದೇ ತೆರನಾಗಿ ಇರುವುದರಿಂದ ಗುರುತಿಸಲಾಗಲಿಲ್ಲ. ಹೀಗಾಗಿ ಗಜಪುಷ್ಪಮಾಲೆ ನೀನು ಧರಿಸಿ, ಇನ್ನೊಮ್ಮೆ ಯುದ್ಧಕ್ಕೆ ಹೋಗು ಎಂದು ತಿಳಿಸುತ್ತಾನೆ. ಅದೇ ಪ್ರಕಾರ ದ್ವಂದ ಯುದ್ಧದಲ್ಲಿ ರಾಮನು ಹಿಂದಿನಿಂದ ವಾಲಿಗೆ ಬಾಣಪ್ರಯೋಗ ಮಾಡುತ್ತಾನೆ. ಆಗ ತೀವ್ರ ವೇದನೆಯಿಂದ ನರಳುತ್ತಾ ವಾಲಿ ಯಾರು ಮೋಸದಿಂದ ಬಾಣ ಪ್ರಯೋಗ ಮಾಡಿದವರು? ಎಂದು ಕೇಳಿದಾಗ ರಾಮ, ಲಕ್ಷ್ಮಣರು ಎದುರಿಗೆ ಹೋಗುತ್ತಾರೆ. ಆಗ ವಾಲಿ ಇದು ನ್ಯಾಯವೇ, ಸತ್ಯತೆ ಇಲ್ಲದ ಮೋಸದ ವಧೆ ಎಂದು ಹೇಳಿದಾಗ, ರಾಮ ನೀನು ಮಾಡಿದ ಕಾರ್ಯ ಎಲ್ಲ ನ್ಯಾಯವಾದದ್ದೇ? ಎಂದು ಪ್ರಶ್ನಿಸಿದಾಗ, ತಾನು ಮಾಡಿದ ಅಪರಾಧಗಳನ್ನು ತಿಳಿದು, ತನ್ನ ಪ್ರೀತಿಯ ಹೆಂಡತಿ, ತಾರಾ ಹಾಗು ಮಗ ಅಂಗದನನ್ನು ಚೆನ್ನಾಗಿ ನೋಡಿಕೊಳ್ಳಲು ಹೇಳಿ, ರಾಜತಂತ್ರಗಳಲ್ಲಿ ವಿಶಿಷ್ಠವಾದ ಸುಗ್ರೀವಾಜ್ಞೆಯ ಸಂದರ್ಭಗಳನ್ನು ಸುಗ್ರೀವನಿಗೆ ಉಪದೇಶಿಸಿ ಪ್ರಾಣತ್ಯಾಗ ಮಾಡುತ್ತಾನೆ. ರಾಮ ಹೇಳುತ್ತಾನೆ, ನಿನ್ನಲ್ಲಿರುವ ಕಪಟತನ, ವಂಚಕಗುಣ, ಮೋಸ, ಕಾಮ, ಅಧಿಕಾರ ದಾಹ ಇಂತಹ ದುರಾತ್ಮನಿಗಿರುವ ಗುಣಗಳಿಗೆ ವಧೆ ಮಾಡಲೇಬೇಕಾಯಿತು ಎಂದು ಹೇಳುತ್ತಾನೆ. ವಿಶಿಷ್ಟವಾದ ವಾಲಿಯ ಶಕ್ತಿ ಹಾಗೂ ಪ್ರತಿಭೆಗಳು ಹೇಗೆ ಒಡಹುಟ್ಟಿದ ಸಹೋದರನಿಂದಲೇ ವಧೆಯಾಗುವ ಪರಿಸ್ಥಿತಿ ಸೃಷ್ಟಿಸುತ್ತದೆ ಎನ್ನುವ ಕಥಾ ನಾಟಕವನ್ನು ಅತ್ಯುತ್ತಮವಾಗಿ ಪ್ರದರ್ಶಿಸಿದರು. ರತಿ, ಮಗ ಅಂಗದ ಯುದ್ಧದ ವೇಳೆಗೆ ತಡೆಗಟ್ಟಲು ಪ್ರಯತ್ನಿಸಿದ್ದು ಹಾಗೂ ಕೊನೆಗೆ ಮಂಗಳಪದ್ಯ ಇತ್ಯಾದಿಗಳು ಮನೋಜ್ಞವಾಗಿ ಮೂಡಿಬಂದಿದ್ದವು. ವಾಲಿ ಕಾರಣ ಹೇಳುತ್ತಾನೆ ಸುಗ್ರೀವ ಸುಂದರ ಸ್ತ್ರೀಯನ್ನು ಅನುಸರಿಸಿ ಹೋಗಿದ್ದ ಘಟನೆಯನ್ನು ಹೇಳಿ, ತಮ್ಮನ ಸತಿಯನ್ನು ತಾನು ಆಳಿದ್ದು ಎನ್ನುವ ಘಟನೆಯನ್ನು ಹೇಳಿ ತಾನು ತಪ್ಪಿತಸ್ಥನಲ್ಲ ಎನ್ನುವ ಆ ಕಾರಣದ ಉಪಕಥೆಯನ್ನು ಕೂಡಾ ಪ್ರದರ್ಶಿಸಿದರು. ಆದರೆ, ರಾಮನು ಸತ್ಯದ ಮೂಲ ಶೋಧಿಸಬೇಕು. ಅವಳನ್ನು ಅನುಸರಿಸಿ ಹೋಗಿ ಆ ಸುಂದರ ಸ್ತ್ರೀಯ ವೇಷದಲ್ಲಿದ್ದ ಮಾಯಾವಿ ರಾಕ್ಷಸಿಯ ಸಂಹಾರ ಮಾಡಿದ ಸುಗ್ರೀವನ ವಿಷಯ ತಿಳಿಸಿ, ಕೋಪ ಹಾಗೂ ಅವೇಶದಲ್ಲಿ ತಮ್ಮನ ಸತಿಯನ್ನಾಳಿ ಹಿಂಸಿಸಿದ್ದು ತಪ್ಪು ಎಂದು ಹೇಳಿ ವಿಶೇಷ ಬಲವಿದೆಯೆಂದು ಕಾಮಖಂಡರದ, ವಿಹ್ವಲವಾದ ಸ್ಥಿತಿಯ ವಿಶ್ಲೇಷಣೆಯನ್ನು ವಿವರಿಸಿ ತನ್ನ ಕರ್ತವ್ಯ ನಿರ್ವಹಿಸಿದ್ದೇನೆ. ಹೀಗಾಗಿ ಹಿಂದಿನಿಂದ ಬಾಣಪ್ರಯೋಗ ಮಾಡಿದ್ದು ತಪ್ಪಲ್ಲ ಒಂದು ರೀತಿಯಿಂದ ಧರ್ಮ ಎಂದು ಹೇಳಿದ ಸನ್ನಿವೇಶ ಅನೂಹ್ಯವಾಗಿ ಮೂಡಿ ಬಂದಿತ್ತು. ಸುಗ್ರೀವನಿಗೆ ರಾಜ್ಯ ಒಪ್ಪಿಸಿ, ಉತ್ತಮ ನಿಯಮದಿಂದ ರಾಜ್ಯಭಾರಮಾಡಬೇಕು, ವ್ಯಕ್ತಿಯ ಪರಿಶ್ರಮವೇ ಯಶಸ್ಸಿನ ಮೂಲ ಎಂದು ರಾಮ ಹೇಳುತ್ತಾನೆ.



ಎಲ್ಲಾ ಪಾತ್ರದವರು ಅತ್ಯುತ್ತಮವಾಗಿ ಅಭಿನಯಿಸಿದರು. ಕಾರ್ಯಕ್ರಮ ಪ್ರೇಕ್ಷಕರ ಮನಸೂರೆಗೊಂಡಿತು.

■ ಡಾ. ಸುಮಂಗಲಾದೇವಿ





# 'ಕಿಂದರಿ ಜೋಗಿ' ನಾಟಕ

**ಅಕ್ಟೋಬರ್ 10 ರಂದು ಸಂಘದ ಸಭಾಂಗಣದಲ್ಲಿ ಮೈಸೂರಿನ ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆಯ ಕಲಾವೃಂದದವರಿಂದ, ಜೆನ್ನಿ ನಿರ್ದೇಶನದ 'ಕಿಂದರಿ ಜೋಗಿ' ನಾಟಕ ಪ್ರದರ್ಶನಗೊಂಡಿತು. ಇದೇ ಸಂದರ್ಭದಲ್ಲಿ ಅಭಿಮತದ 21ನೇ ವರ್ಷದ ಮೊದಲ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು.**








ಕವನ

## ದೆಹಲಿಯ ಮಳೆ

ಮಳೆ ಮಳೆ ಮಳೆ
ಧಾರಾಕಾರವಾಗಿ ಸುರಿದ ಮಳೆ.
ಮುಗಿಲು ಭೂಮಿಯನ್ನು ಒಂದು ಮಾಡಿದ ಮಳೆ
ಭಾದ್ರಪದದಲ್ಲೂ ದೆಹಲಿಯನ್ನು ತಂಪಾಗಿಟ್ಟ ಮಳೆ.

ಪುಳಕಗೊಂಡಿತು ಇಳೆ.
ಧರೆಗೆ ಬಂದಿತು ಕಳೆ.
ಹುಲುಸಾಯಿತು (ಹಾಳಾಯಿತೋ?!) ಬೆಳೆ.
ದೆಹಲಿಯು ಎಂದೂ ಕಂಡರಿಯದಂಥ ಮಳೆ.

ಭೂಮಿಗೂ, ಆಗಸಕ್ಕೂ ಸಂಪರ್ಕ
ಉಂಟೇನೋ ಎನಿಸುತ್ತಿತ್ತು.

ಯಮುನೆಯಲ್ಲಿ ಪ್ರವಾಹ ಬಂದಿತ್ತು.
ಆಗಸದಿಂದೇನೋ ಸಂದೇಶವಿದೆ ಎನಿಸುತ್ತಿತ್ತು.
ಆ ಸಂದೇಶ' ನಮ್ಮ ಜೀವನದ ಮೇಲೂ ಪರಿಣಾಮ ಬೀರಿತ್ತು.
ದೆಹಲಿ ಹೋಗಿ ಮಡಿಕೇರಿಯಾಯಿತೇನೋ ಎನಿಸುತ್ತಿತ್ತು.

ಬೇಡಿದ್ದೆವು ಆ ಭಗವಂತನಲ್ಲಿ
ಆಗದಿರಲಿ ಅತಿವೃಷ್ಟಿ ಇಲ್ಲಿ.
ಬಡವರ ಜೀವನವನ್ನು ಸಂಕಷ್ಟಕ್ಕೀಡು ಮಾಡದಿರಲಿ
ದೆಹಲಿಯಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕ್ರೀಡೆಗಳು
ಸುಗಮವಾಗಿ ನಡೆಯಲಿ ಎಂದು.



■ **ಉಮಾ ಶ್ರೀನಿವಾಸ**

## ಸಪ್ತ ಸಾಗರ

ಸಪ್ತ ಸಾಗರದಲಿ ಸಪ್ತ ಸ್ವರಗಳ ಶಬ್ದನಾದ
ಸಾವಿರ ಸಾವಿರ ಬೋರ್ಗರೆವ ಅಲೆಗಳ ನಿನಾದ
ಸಾಹಿತ್ಯ ರಸಿಕ ರಸ ಮಣಿಗಳಿಗೆ ರಸದಾಮೃತ
ಸತ್ಯ ಧರ್ಮ ಸರಿಗಮದ ಸಾಗರ ಸಂಗಮ

ತರ ತರ ನಿರಂತರ ಅಂತರ ಅಂತರ ತರಂಗ
ಅಂತರಂಗ ಬಹಿರಂಗ ಸಮಾಗಮದ ಜಲತರಂಗ
ಮನುಕುಲದ ಅಂಗಳ ಜಲಧಾರೆ ಮಂಗಳ
ಮಾನವ ವಿಶಾಲ ವಿಕಾಸದ ದೇಗುಲ

ಅಮೃತ ನರ್ತನ ತಲತಲಾಂತರದ ಪುನರ್ವರ್ತನ
ಆಶೆ ಆಕಾಂಕ್ಷೆಗಳ ನವ ನವ ಜೀವ ಚೇತನ
ಜಲ ಜಲ ಹರಿದು ಕುಪ್ಪಳಿಸುವ ಜಲಧಾರೆ
ಜಂಗಮರ ಸಂಗಮ ಚಿಂತನ ಮಂಥನ ಆಸರೆ

ನಯನ ಮಧು ಮಧುರ ಮನೋಹರ
ಮಯನ ಮಾಯ ಲೋಕದ ಸುರ ಸುಂದರ
ನವ ನವ ರಸ ಸ್ವರ ಸಂಗೀತ ಗಾನ ಗಂಧರ್ವ
ಶಿವನ ಶಿರದಿ ಹರಿದು ಬಂದ ಗಂಗಾಮೃತ

■ ಎ. ಶಿವಾನಂದ ಕರ್ಕೇರ

# ಮಹಮ್ಮದ್ ಕುಂಞ ಬೋಳುವಾರು ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ಶ್ರೀ ಮಹಮ್ಮದ್ ಕುಂಞ ಬೋಳುವಾರು ಅವರಿಗೆ 2010ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಅವರು ಬರೆದ 'ಪಾಪು ಗಾಂಧಿ, ಗಾಂಧಿ ಪಾಪು ಆದ ಕತೆ'ಗೆ ಈ ಪ್ರಶಸ್ತಿ ಲಭಿಸಿದೆ. ಕನ್ನಡ ಪುಸ್ತಕ ಪ್ರಾಧಿಕಾರ ಈ ಪುಸ್ತಕವನ್ನು ಪ್ರಕಟಿಸಿದೆ. ಮಕ್ಕಳ ಸಾಹಿತ್ಯವಾದ ಈ ಪುಸ್ತಕವು ಅನೇಕ ಮಕ್ಕಳಿಗೆ ಓದಲು ಪ್ರೇರೇಪಿಸುತ್ತದೆ ಮತ್ತು ರಾಷ್ಟ್ರಪಿತನ ಬಗ್ಗೆ ಯುವಜನರ ಹೃದಯದಲ್ಲಿ ಗೌರವವನ್ನು ಮೂಡಿಸುತ್ತದೆ ಎಂದು ಶ್ರೀ ಬೋಳುವಾರು ಅವರು ಪ್ರಶಸ್ತಿ ಬಂದ ಸಂದರ್ಭದಲ್ಲಿ ತಿಳಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನವರಾದ ಇವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. 'ಅತ್ತ ಇತ್ತಗಲ' 'ಸುತ್ತಮುತ್ತ', 'ಅಂಕ', 'ದೇವರುಗಳ ರಾಜ್ಯದಲ್ಲಿ', 'ಆಕಾಶಕ್ಕೆ ನೀಲಿ ಪರದೆ', 'ಒಂದು ತುಂಡು ಗೋಡೆ' ಇವು ಅವರ ಕೆಲವು ಕೃತಿಗಳು. ಇವರು 'ಜೆಹಾದ್' ಎಂಬ ಕಾದಂಬರಿಯನ್ನು ಬರೆದಿದ್ದಾರೆ. ಬೋಳುವಾರು ಅವರು 'ತಟ್ಟು ಚಪ್ಪಾಳೆ ಪುಟ್ಟ ಮಗು' ಎಂಬ ಮಕ್ಕಳ ಕವನ ಸಂಕಲನವನ್ನೂ ಬರೆದಿದ್ದಾರೆ ಇದಲ್ಲದೆ 12 ಮಕ್ಕಳ ನಾಟಕಗಳನ್ನು ರಚಿಸಿದ್ದಾರೆ. ಇವರಿಗೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಸೇರಿದಂತೆ ಅನೇಕ ಪ್ರಶಸ್ತಿಗಳು ಲಭಿಸಿವೆ.

ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾದ ಶ್ರೀ ಬೋಳುವಾರು ಅವರಿಗೆ ಇನ್ನೂ ಅನೇಕ ಪ್ರಶಸ್ತಿಗಳು ದೊರೆಯಲಿ ಎಂದು ದೆಹಲಿ ಕನ್ನಡಿಗರ ಪರವಾಗಿ ಅಭಿಮತ ಹಾರೈಸುತ್ತದೆ.

# ಕರ್ನಾಟಕ ರಾಜ್ಯೋತ್ಸವ



ನವೆಂಬರ್ 1ರಂದು ಸಂಘದ ಮುಖ್ಯದ್ವಾರ ಶೃಂಗಾರಗೊಂಡು ಕಂಗೊಳಿಸುತ್ತಿತ್ತು. 55ನೇ ಕರ್ನಾಟಕ ರಾಜ್ಯೋತ್ಸವದ ಸಂಭ್ರಮ. ರಾಜ್ಯೋತ್ಸವ ಆಚರಣೆಯ ಅಂಗವಾಗಿ ಧ್ವಜಾರೋಹಣ ಹಾಗೂ ಕನ್ನಡ ಮಾತೆ ಭುವನೇಶ್ವರಿಯ ಪೂಜೆ ನಡೆಯಿತು. ಧ್ವಜಾರೋಹಣವನ್ನು ಸಂಘದ ಹಿರಿಯ ಸದಸ್ಯ ಶ್ರೀ ಚಂದ್ರಭಾನ್‌ಸಿಂಗ್ ಮಾಡಿದರು. ಭುವನೇಶ್ವರಿಯ ಪೂಜೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ವಿ.ಗೋಪಿನಾಥ ಅವರು ಮಾಡಿದರು. ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೂ ಹಾಗೂ ಇನ್ನೂ ಅನೇಕ ಸದಸ್ಯರು ಉಪಸ್ಥಿತರಿದ್ದರು. ಸಾಯಂಕಾಲ ರಾಜ್ಯೋತ್ಸದ ಉದ್ಘಾಟನಾ ಸಮಾರಂಭದ ಕಾರ್ಯಕ್ರಮದ ಅಂಗವಾಗಿ ಇತ್ತೀಚೆಗೆ ನಡೆದ ಸಂಗೀತ ಶಿಬಿರದಲ್ಲಿ ಪಾಲ್ಗೊಂಡ ಸದಸ್ಯರುಗಳಿಂದ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು










# ಉದ್ಘಾಟನಾ ಸಮಾರಂಭ

ವಿತರಿಸಲಾಯಿತು. ಸಂಗೀತ ಸಂಜೆ ಕಾರ್ಯಕ್ರಮ ಅತ್ಯಂತ ಸುಂದರವಾಗಿ ಮೂಡಿಬಂತು. ಅದರಲ್ಲೂ ಚಿಕ್ಕಮಕ್ಕಳು ಪ್ರೇಕ್ಷಕರ ಮನಸೂರೆಗೊಂಡರು. ಇಂತಹ ನಮ್ಮ ಪ್ರತಿಭೆಗಳು ಮುಂದೆ ಬರಲಿ ಎಂಬುದು ನಮ್ಮ ಆಶಯ. ಐ.ಎ.ಎಸ್ ಆಕಾಂಕ್ಷಿಗಳಾದ ಕು. ಮಿಲನ ಭರತನಾಟ್ಯವನ್ನು ಹಾಗೂ ರಮ್ಯ ಸುಶ್ರಾವ್ಯವಾಗಿ ಕೊಳಲು ನುಡಿಸುವುದರ ಮೂಲಕ ಮನಸೂರೆಗೊಂಡರು.

ಸಂಗೀತ ಕಾರ್ಯಕ್ರಮದ ನಂತರ ಕೃಷಿಕ್ ಸರ್ವೋದಯ ಫೌಂಡೇಶನ್‌ನವರ ಸಹಕಾರದಿಂದ ಐ.ಎ.ಎಸ್. ಅಧಿಕಾರಿಗಳ ಮತ್ತು ಐ.ಎ.ಎಸ್.ಆಕಾಂಕ್ಷಿಗಳ ನಡುವೆ ವಿಚಾರ ವಿನಿಮಯ ಕಾರ್ಯಕ್ರಮ ನಡೆಯಿತು. ಸುಮಾರು 250ಕ್ಕೂ ಹೆಚ್ಚು ಐ.ಎ.ಎಸ್.ಆಕಾಂಕ್ಷಿಗಳು ಹಾಗೂ 7 ಐ.ಎ.ಎಸ್.ಅಧಿಕಾರಿಗಳು ಈ ವಿಚಾರ ವಿನಿಮಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.














ವಿಶೇಷ ಲೇಖನ

# ಭಾವೀ ಕರ್ನಾಟಕದ ಕಲ್ಪನೆ

ನವೆಂಬರ್ 1, 2010ರಂದು ಕರ್ನಾಟಕ ರಾಜ್ಯ ಏಕೀಕೃತವಾಗಿ 54 ವರ್ಷಗಳು ಮುಗಿದು 55ನೇ ವರ್ಷದಲ್ಲಿ ದಾಪುಗಾಲು ಹಾಕಿರುವದು. ಭಾರತದ ನೆಲದಲ್ಲಿ ಹಲವಾರು ಅರಸರು ತಮ್ಮ ರಾಜ್ಯ, ಸಾಮ್ರಾಜ್ಯಗಳನ್ನು ಸ್ಥಾಪಿಸಿ, ಆಡಳಿತ ನಡೆಸಿರುವಂತೆ ನಮ್ಮ ಕನ್ನಡ ನಾಡು ಕರ್ನಾಟಕದಲ್ಲಿಯೂ ಹಲವು ಅರಸು ಮನೆತನಗಳು ತಮ್ಮ ರಾಜ್ಯ, ಸಾಮ್ರಾಜ್ಯಗಳನ್ನು ಸ್ಥಾಪಿಸಿ ಅಭದ್ರ-ಸುಭದ್ರ ಆಡಳಿತ ನಡೆಸಿ ಪತನಗೊಂಡವು. ಯಾವುದೇ ನಾಗರೀಕತೆಯಾಗಲಿ, ಸಂಸ್ಕೃತಿಯಾಗಲಿ, ರಾಜ್ಯ-ಸಾಮ್ರಾಜ್ಯಗಳಾಗಲಿ ಮಾನವ ವ್ಯಕ್ತಿಯಂತೆ ಹುಟ್ಟಿ, ಬೆಳೆದು, ಪ್ರೌಢಾವಸ್ಥೆಯನ್ನು ತಲುಪಿ, ಕೊನೆಗೆ ಮೃತ್ಯು ಹೊಂದುತ್ತದೆ. ಮೃತ್ಯು ಹೊಂದಿದ ಮನುಷ್ಯ ದೇಹ ಭೂಗರ್ಭದಲ್ಲಿ ಲೀನವಾಗುವದು. ಆದರೆ ನಾಗರೀಕತೆ, ಸಂಸ್ಕೃತಿ, ಸಾಮ್ರಾಜ್ಯ-ರಾಜ್ಯ ಮೃತ್ಯು ಹೊಂದುವ ಮೊದಲು ಅತೀಮತ ಧರ್ಮಶ್ರದ್ಧೆಯ ಮೋಡಿಗೆ ಒಳಗಾಗುತ್ತದೆ. ಜೊತೆಗೆ ನೂತನ ಧಾರ್ಮಿಕ ಆತ್ಮಾಭಿಮಾನದ ಜ್ವರದ ತಾಪವನ್ನು ಅನುಭವಿಸುತ್ತದೆ. ಆ ಸ್ಥಿತಿಯು ಆ ರಾಜ್ಯದ ಸಾವನ್ನು ಮತ್ತು ಪ್ರಾಯಶಃ ನೂತನ ರಾಜ್ಯದ ಉದಯವನ್ನು ಸೂಚಿಸುತ್ತದೆ. ಅದು ನಿರಂತರ ಮುಂದುವರೆಯುವದು. ಹೀಗಾಗಲು ಹಲವಾರು ಕಾರಣಗಳಿರುವವು. ನಮ್ಮ ದೇಶ ಮತ್ತು ನಮ್ಮ ರಾಜ್ಯ ಕರ್ನಾಟಕವಾಗಲಿ ಇದಕ್ಕೆ ಹೊರತಾಗಿಲ್ಲ. ಅಂದರೆ ಕರ್ನಾಟಕ ಹುಟ್ಟಿ, ಬೆಳದು, ಪ್ರೌಢಾವಸ್ಥೆಯನ್ನು ತಲುಪಿ ಮೃತ್ಯು ಹೊಂದುತ್ತಿರುವಂತೆ ನವ ಕರ್ನಾಟಕದ ಉದಯವಾಗಿದೆ. ಅದಕ್ಕಾಗಿ ನಮ್ಮ ಕನ್ನಡ ನಾಡಿನ ಪೂರ್ವಜರು ಹಲವು ಬಗೆಯ ಹೋರಾಟ ಮಾಡಿ ನವ ಕರ್ನಾಟಕದ ಉದಯಕ್ಕೆ ಕಾರಣರಾಗಿರುವರು. ಆದರೂ ಕರ್ನಾಟಕ ಪೂರ್ಣವಾಗಿ ಏಕೀಕೃತವಾಗಿಲ್ಲ. ಹಲವು ಕನ್ನಡ ಪ್ರದೇಶಗಳು ಈಗಲೂ ಮರಾಠಿ, ತೆಲುಗು ಮತ್ತು ಮಲಯಾಳಂ ಭಾಷಾ ರಾಜ್ಯಗಳ ಹಿಡಿತದಲ್ಲಿದ್ದು ಒದ್ದಾಡುತ್ತಿರುವವು. ಪರ ಭಾಷೆಗಳ ಹಿಡಿತದಲ್ಲಿರುವ ಕನ್ನಡ ಭಾಷೆಯ ಪ್ರದೇಶಗಳ ವಿಮೋಚನೆ ಆಗಬೇಕಿದೆ.

ಕರ್ನಾಟಕದಲ್ಲಿ ಮೊದಲ ಬಾರಿಗೆ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿ ಆಡಳಿತ ನಡೆಸಿದವರು ಶಾತವಾಹನರು. ಅವರ ನಂತರ ಬನವಾಸಿ ಕದಂಬರು, ತಲಕಾಡಿನ ಗಂಗರು, ಬಾದಾಮಿ ಚಾಲುಕ್ಯರು, ಮಲಖೇಡದ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಶೇವುಣರು ಮತ್ತು ದೋರಸಮುದ್ರದ ಹೊಯ್ಸಳರು ಹೀಗೆ ಅನೇಕ ರಾಜ್ಯ ಸಾಮ್ರಾಜ್ಯಗಳು ಹುಟ್ಟಿ, ಬೆಳೆದು, ಪ್ರೌಢಾವಸ್ಥೆಯನ್ನು ತಲುಪಿ, ಮೃತ್ಯು ಹೊಂದುವದರೊಂದಿಗೆ ಇತಿಹಾಸದ ಪ್ರಾಚೀನ ಯುಗ ಮುಗಿದು ಮಧ್ಯ ಯುಗದ ಪ್ರಾರಂಭವಾಯಿತು. ಈ ಯುಗದಲ್ಲಿ ಸಾಮಾಜಿಕ ಬದಲಾವಣೆಯ ಹರಿಕಾರ ಮಹಾನ್ ಮಾನವತಾವಾದಿ ಬಸವೇಶ್ವರರು ಕರ್ನಾಟಕದಲ್ಲಿ ಜನ್ಮ ತಾಳಿ ವೀರಶೈವ ಧರ್ಮವನ್ನು ಸ್ಥಾಪಿಸಿ ಪ್ರಸಾರ ಮಾಡಿದರು.

ಇತಿಹಾಸದ ಮಧ್ಯಯುಗ ಆರಂಭದೊಂದಿಗೆ ಕರ್ನಾಟಕದಲ್ಲಿ ಮುಸಲ್ಮಾನ ರಾಜ್ಯಗಳ ಸ್ಥಾಪನೆಯಾಗಿ, ಅವರ ನಿರಂಕುಶ ಪ್ರಭುತ್ವದಿಂದ ಹಿಂದೂ ಧರ್ಮಕ್ಕೆ ಗ್ರಹಣ ಹಿಡಿದಂತಾಯಿತು. ಇದರಿಂದ ಹಿಂದು ಧರ್ಮವನ್ನು ರಕ್ಷಿಸಲು ದಕ್ಷಿಣ ಭಾರತದಲ್ಲಿ ಅದೂ ಕರ್ನಾಟಕದಲ್ಲಿ ಹಿಂದು ರಾಜ್ಯ ವಿಜಯನಗರದ ಉದಯವಾಯಿತು. ಕರ್ನಾಟಕದಲ್ಲಿ ಒಂದನೇ ದೇವರಾಯ ರಾಜನಾಗಿದ್ದ ಕಾಲದಲ್ಲಿ ವಿಜಯನಗರ ಕೇವಲ ರಾಜ್ಯವಾಗಿತ್ತು. ಅದನ್ನು ಸಾಮ್ರಾಜ್ಯವನ್ನಾಗಿಸಿ ಇಡೀ ದಕ್ಷಿಣ ಭಾರತಕ್ಕೆ ಪ್ರೌಢದೇವರಾಯನು ಕನ್ನಡ ಸಮ್ರಾಟನಾದನು. ಅವನ ಕಾಲದಲ್ಲಿ ಮೊದಲ ಬಾರಿಗೆ ಕಾಲುವೆ ನೀರಾವರಿ ಜಾರಿಗೆ ಬಂದು ರೈತರು ನಾಲ್ಕು ಪಟ್ಟು ಉತ್ಪನ್ನ ಬೆಳೆಯುವಂತಾಗಿ ಸುಖ, ಶಾಂತಿ, ನೆಮ್ಮದಿ ನೆಲೆಗೊಳ್ಳುವಂತಾಯಿತು. ಅದನ್ನು ಕೃಷ್ಣದೇವರಾಯ ಮುಂದುವರೆಸಿದ. ರಕ್ಕಸ-ತಂಗಡಗಿ ಕದನದೊಂದಿಗೆ ವಿಜಯನಗರ ಸಮ್ರಾಜ್ಯದ ಪತನವಾಗಿ ಅದೇ ನೆಲದಲ್ಲಿ ಕೆಳದಿ ಹಾಗೂ ಮೈಸೂರು ರಾಜ್ಯಗಳು ಉದಯವಾದವು. ಉತ್ತರ ಕರ್ನಾಟಕ ಭಾಗದಲ್ಲಿ ಮರಾಠರ ಪ್ರಭುತ್ವ ವಿಸ್ತರಿಸಿ, ಹಲವು ದಶಕಗಳವರೆಗೆ ಕನ್ನಡ ಪ್ರದೇಶದಲ್ಲಿ ಪ್ರಭುತ್ವ ಸ್ಥಾಪಿಸಲು ಕದನಗಳು ನಡೆದವು.

ಇತಿಹಾಸದ ಆಧುನಿಕ ಯುಗದ ಆರಂಭದ ಎರಡು ಶತಮಾನಗಳಲ್ಲಿ ಕರ್ನಾಟಕ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ದುರದೃಷ್ಟವಶಾತ್ ಕರ್ನಾಟಕ ಬ್ರಿಟಿಷರ ಆಡಳಿತದ ಅವಧಿಯಲ್ಲಿ ಛಿದ್ರ-ಛಿದ್ರವಾಗಿ ಮುಂಬಯಿ, ಮದ್ರಾಸ ಮತ್ತು ಕೊಡಗು ಪ್ರಾಂತಗಳಲ್ಲಿ ವಿಭಾಗಿಸಲ್ಪಟ್ಟಿತು. ಅಲ್ಲದೆ ಹೈದರಾಬಾದ್ ಮತ್ತು ಮೈಸೂರು ಸಂಸ್ಥಾನಗಳು ಸೇರಿದಂತೆ 18 ದೇಶೀಯ ಸಂಸ್ಥಾನಗಳ ಆಡಳಿತ ಮುಂದುವರಿಯಿತು. ಹೀಗೆ ಕನ್ನಡ ಪ್ರದೇಶಗಳು 21 ತುಣುಕುಗಳಾಗಿ ಕನ್ನಡ ಭಾಷೆಗೆ ನೆಲೆ ಇಲ್ಲದಂತಾಯಿತು.

ಕನ್ನಡ ನೆಲ, ಕನ್ನಡ ಭಾಷೆ ಹಾಗೂ ಕನ್ನಡಿಗರ ಅಭಿವೃದ್ಧಿ ಬಗ್ಗೆ ಕರ್ನಾಟಕ ಹೇಗಿರಬೇಕೆಂಬ ಒಂದು ಕಲ್ಪನೆ ಮುಂದಿನಂತಿರುವದು. ಕನ್ನಡ ಸಾಮ್ರಾಟ ಪ್ರೌಢದೇವರಾಯನ ಕಾಲದಲ್ಲಿ ವಿಜಯನಗರದ ರಾಜ ಬೀದಿಗಳಲ್ಲಿ ವಜ್ರ, ವೈಡೂರ್ಯ, ಮುತ್ತು ರತ್ನಗಳು ಬಳ್ಳದಿಂದ (ಸೇರಿನಿಂದ) ಅಳೆಯಲಾಗುತ್ತಿತ್ತು. ಏಕೀಕೃತ ಕರ್ನಾಟಕದ ಬೀದಿಗಳಲ್ಲಿ ದೊರೆಯುವ ವಸ್ತುಗಳೇ ಬೇರೆ. ಕರ್ನಾಟಕದಲ್ಲಿ ಸಂಪತ್ತಿನ ಕೊರತೆ ಇಲ್ಲ. ಆದರೆ ಸಂಪತ್ತಿನ ಬಹುಭಾಗ ಸರ್ಕಾರದ ಬೊಕ್ಕಸಕ್ಕೆ ಸಂದಾಯವಾಗದೆ ಕೆಲವೇ ಜನರ ಖಾಸಗಿ ಖಜಾನೆಗೆ ಸಂದಾಯವಾಗುವಂತೆ ಕಾಣುತ್ತದೆ. ಈ ಪದ್ಧತಿ ಇಂದು ನಿನ್ನೆಯದಲ್ಲ. 1970ರ ದಶಕದಿಂದ ಪ್ರಾರಂಭವಾಗಿದೆ ಎಂದು ಹೇಳಬಹುದು. ಯಾವುದೇ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದರೂ ಅದು ಕನ್ನಡಿಗರ ಬಹುಮತದ ತೀರ್ಪಿನಿಂದ ಆಯ್ಕೆಯಾದ ಸರ್ಕಾರ ಎಂದು ಗೌರವಿಸಿ ರಾಜ್ಯದ ಜನತೆಯ ಅಭಿವೃದ್ಧಿಗಾಗಿ ದುಡಿಯುವಂತಿರಬೇಕು. ಮತ್ತಸದ್ದಿಯಾಗಿರುವ ಮುಖ್ಯಮಂತ್ರಿ ಕನ್ನಡ ಭಾಷೆ, ಸಂಸ್ಕೃತಿ, ಕನ್ನಡಿಗರ ಸಮಗ್ರ ಅಭಿವೃದ್ಧಿಗೆ ದುಡಿಯಲು ಸ್ವತಂತ್ರನಾಗಿರಬೇಕು. ಒಂದು ವೇಳೆ ಸರ್ವಾಧಿಕಾರ ಆಡಳಿತ ಸ್ಥಾಪನೆಯಾಗಿ ಕನ್ನಡಿಗರು ನೀಡುವ ತೆರಿಗೆ ಹಣದ ಮತ್ತು ರಾಜ್ಯದ ಸಂಪನ್ಮೂಲದ ದುರುಪಯೋಗವಾದರೆ, ಅಂತಹ ದುರುಪಯೋಗವನ್ನು ತಡೆಯಲು ತನಿಖಾ ಸಂಸ್ಥೆಗಳನ್ನು ಬಲಪಡಿಸಬೇಕು. ತನಿಖಾ ಸಂಸ್ಥೆಗಳು ರಾಜ್ಯ ಸರ್ಕಾರದಿಂದ ಪೂರ್ಣ ಸ್ವತಂತ್ರವಾಗಿರಬೇಕು. ತನಿಖಾ ಸಂಸ್ಥೆಯ ಸದಸ್ಯರು ಕೇಂದ್ರ ಲೋಕಸೇವಾ ಆಯೋಗದಿಂದ ನೇಮಕಾತಿ ಪಡೆದ ಪ್ರತಿಭಾವಂತ ಅಧಿಕಾರಿಗಳಿಂದ ಕೂಡಿದವುಗಳಾಗಿರಬೇಕು. ಯಾವುದೇ ಕಾರ್ಯ ಕೈಗೆತ್ತಿಕೊಂಡರು ಅದರಲ್ಲಿ ಕನ್ನಡ ಭಾಷೆ ಹಾಗೂ ಕನ್ನಡಿಗರ ಸರ್ವತೋಮುಖ ಅಭಿವೃದ್ಧಿ ಮೂಲ ಮಂತ್ರವಾಗಿರಬೇಕು. ಯಾಕೆಂದರೆ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬ ಮಾನವನು ಮರಣ ಹೊಂದುವುದು ತಪ್ಪಿದ್ದಲ್ಲ. ಆದುದರಿಂದ ಮಾನವನಾಗಿ ಕನ್ನಡ ಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬ ಕನ್ನಡಿಗನು ಕನ್ನಡ ನೆಲ ಹಾಗೂ ಜಲದ ರಕ್ಷಣೆಗಾಗಿ ದುಡಿಯುವಂತವನಾಗಿರಬೇಕು.

1980ರ ದಶಕದಲ್ಲಿ ಪದವಿಧರನಿಗೆ ಕನ್ನಡ ನೆಲದಲ್ಲಿ ಬಹಳ ಗೌರವವಿದ್ದಿತು. ಸ್ನಾತಕೋತ್ತರ ಪದವಿ ಪಡೆದ ಕನ್ನಡಿಗರೆಂದರೆ ಸಮಾಜದಲ್ಲಿ ವಿಶೇಷವಾದ ಗೌರವವಿದ್ದಿತ್ತು. ಉದಾರಿಕರಣದ ಪ್ರತಿಫಲವಾಗಿ ಕರ್ನಾಟಕದಲ್ಲಿ ಸ್ನಾತಕೋತ್ತರ ಕೇಂದ್ರಗಳು ಅಣಬೆಗಳಂತೆ (Mushroom) ಬೆಳೆದಿರುವವು. ಇತ್ತೀಚೆಗಂತು ಖಾಸಗಿ ಶಿಕ್ಷಣ ಸಂಸ್ಥೆಗಳು ವಿಶ್ವವಿದ್ಯಾನಿಲಯಗಳ ಸ್ಥಾನ ಪಡೆದಿರುವವು. ಪರಿಣಾಮವಾಗಿ ಸ್ನಾತಕೋತ್ತರ ಪದವೀಧರರು ನಿರುದ್ಯೋಗಿಗಳಾಗಿರುವರು. ಕನ್ನಡಿಗರೆಲ್ಲರು ಉನ್ನತ ಶಿಕ್ಷಣ ಪಡೆಯುವದರಲ್ಲಿ ತಪ್ಪಿಲ್ಲ. ಆದರೆ ಅಂತಹ ಸ್ನಾತಕೋತ್ತರ ಪದವೀಧರರಿಗೆ ಉದ್ಯೋಗಾವಕಾಶಗಳು ದೊರೆಯಬೇಕು. ಮಾಧ್ಯಮಿಕ ಶಿಕ್ಷಣದವರೆಗೆ ಉಚಿತ ಶಿಕ್ಷಣ ದೊರೆಯುವಂತಿರಬೇಕು. ಆ ಶಿಕ್ಷಣ ಶಿಕ್ಷಕರು ಕಲಿಸುವ ಬರೀ ಓದು ಬರಹಕ್ಕೆ ಸೀಮಿತವಾಗಿರದೆ ವಿದ್ಯಾರ್ಥಿಗಳು ತಮ್ಮ ಜೀವನ ನಡೆಸುವ ಸ್ವಯಂ ಉದ್ಯೋಗ ಕಲಿಯುವಂತಾಗಬೇಕು. ಡಾಕ್ಟರೇಟ್ ಪದವಿ ಪಡೆದ ಎಷ್ಟೋ ಸಂಶೋಧಕರು ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಾಗಿ ಹಾಗೂ ಕಾರ್ಯಾಲಯಗಳಲ್ಲಿ ಗುಮಾಸ್ತರಾಗಿ ಕಾರ್ಯ ನಿರ್ವಹಿಸುತ್ತಿರುವರು. ಕರ್ನಾಟಕದಲ್ಲಿನ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಜೀವನೋಪಾಯಕ್ಕೆ ಸಹಾಯವಾಗುವ ವೃತ್ತಿ ಶಿಕ್ಷಣ ಕೊಡುವ ವ್ಯವಸ್ಥೆಯ ನಿರ್ಮಾಣ ಮಾಡಿ, ಕರ್ನಾಟಕ ಇಡೀ ದೇಶಕ್ಕೆ ಮಾದರಿ

ರಾಜ್ಯವಾಗುವಂತಾಗಬೇಕು. ಅಂದರೆ ಉನ್ನತ ಶಿಕ್ಷಣದ ಪ್ರವೇಶದಲ್ಲಿ ಮಿತಿ ಇರುವಂತಿರಬೇಕು.

ಕಲೆ, ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಮುಂದಾಗಿ ಜನತೆ ಸ್ವಯಂ ಪ್ರೇರಣೆಯಿಂದ ಅಂತಹ ಕಾರ್ಯದಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಉತ್ತಮ ಸಮಾಜ ನಿರ್ಮಿಸಲು ಸರ್ಕಾರ-ಸರ್ಕಾರೇತರ ಸಂಸ್ಥೆಗಳಿಗೆ ಸಹಾಯ ಸಹಕಾರ ನೀಡಿ ಕರ್ನಾಟಕ ರಾಜ್ಯದ ಒಟ್ಟು ಅಭಿವೃದ್ಧಿಗಾಗಿ ದುಡಿಯುವ ಪ್ರವೃತ್ತಿ ಕನ್ನಡಿಗರಲ್ಲಿ ಬೆಳೆಯಬೇಕು. ಕರ್ನಾಟಕದಲ್ಲಿ ವಾಸಿಸುವ ಕನ್ನಡಿಗರು ಹಾಗೂ ಹೊರನಾಡ ಕನ್ನಡಿಗರು ಗತಕಾಲದಲ್ಲಿನ ಘಟನೆಗಳನ್ನು ನೆನಪಿಸಿಕೊಂಡು ಭವಿಷ್ಯತ್ತಿನ ಸಮಗ್ರ ಕರ್ನಾಟಕದ ನಿರ್ಮಾಣ ಹಾಗೂ ಅದರ ಅಭಿವೃದ್ಧಿಗೆ ಸ್ವಯಂ ಪ್ರೇರಣೆಯಿಂದ ಮುಂದಾಗಿ ಕನ್ನಡದ ಬಾವುಟವನ್ನು ಪ್ರಪಂಚದಾದ್ಯಂತ ಹಾರಿಸುವ ಪ್ರತಿಭೆ ಪಡೆಯುವಂತಿರಬೇಕು. ಅಂದರೆ ಕನ್ನಡಿಗರಿಗೆ ಪ್ರಾಥಮಿಕ ಶಿಕ್ಷಣದಿಂದ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಬೋಧನೆ ಕಡ್ಡಾಯ ಮಾಡಬೇಕು. ಇಂಗ್ಲಿಷ್ ಭಾಷೆಯಲ್ಲಿ ಹಿಡಿತ ಸಾಧಿಸುವ ಕನ್ನಡಿಗ ಪ್ರಪಂಚದ ಯಾವ ಭಾಗದಲ್ಲಿಯಾದರೂ ನೆಲೆಸಿ ಕನ್ನಡ ಭಾಷೆಯ ಪ್ರಸಾರ ಕಾರ್ಯ ಮಾಡಬಹುದು. ಕನ್ನಡಿಗರ ಬೆಳವಣಿಗೆಗೆ ಕನ್ನಡ ಭಾಷೆ ಎಷ್ಟು ಮುಖ್ಯ ಹಾಗೆಯೇ ಜ್ಞಾನ ವೃದ್ಧಿಗೆ ಇಂಗ್ಲಿಷ್ ಭಾಷೆ ಕಲಿಕೆ ಅಷ್ಟೆ ಮುಖ್ಯವೆಂದು ತಿಳಿದು ಕನ್ನಡ ಹಾಗೂ ಇಂಗ್ಲಿಷ್ ಕಲಿಕೆಗೆ ಪ್ರೋತ್ಸಾಹ ನೀಡುವ ಸ್ವತಂತ್ರ ಶಿಕ್ಷಣ ಸಂಸ್ಥೆಗಳು ಕರ್ನಾಟಕದಾದ್ಯಂತ ನಿರ್ಮಾಣವಾಗುವಂತಾಗಬೇಕು.

ಅಂದರೆ ಸಾಮಾನ್ಯ ಶಿಕ್ಷಣದ ಜೊತೆಗೆ ತಾಂತ್ರಿಕ ಹಾಗೂ ಔಷಧ ವಿಜ್ಞಾನ (Medical Science) ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡುವಂತಿರಬೇಕು. ಆರೋಗ್ಯವೇ ಭಾಗ್ಯ ಎಂಬ ನಾಣ್ನುಡಿಯಂತೆ ಸರ್ಕಾರ ಆರೋಗ್ಯ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುವಂತಿರಬೇಕು. ಪ್ರತಿಯೊಂದು ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳ ಸ್ಥಾಪನೆಯಾಗಬೇಕು. ನಗರಗಳಿಗೆ ವಲಸೆ ಬರುತ್ತಿರುವ ಹಳ್ಳಿಗರನ್ನು ತಡೆಯಲು ಆಯಾ ಗ್ರಾಮಗಳಲ್ಲಿ ಗ್ರಾಮೋದ್ಯೋಗಗಳ ಸೃಷ್ಟಿಯಾಗಬೇಕು. ರಾಜ್ಯದ ಅವಶ್ಯಕತೆಗೆ ಅನುಗುಣವಾಗಿ ಕಾರ್ಖಾನೆಗಳನ್ನು ಪ್ರತಿ ಜಿಲ್ಲೆಯ ಬಂಜರ ಭೂಮಿಯಲ್ಲಿ ಸ್ಥಾಪಿಸುವ ಮೂಲಕ ಪರರಾಜ್ಯಗಳಿಗೆ ವಲಸೆ ಹೋಗುವ ಕನ್ನಡಿಗರಿಗೆ ಕರ್ನಾಟಕದಲ್ಲಿಯೇ ಉದ್ಯೋಗವಕಾಶಗಳನ್ನು ಒದಗಿಸಿ ಕನ್ನಡಿಗರು ವಲಸೆ ಹೋಗುವದನ್ನು ತಡೆಯುವಂತಾಗಬೇಕು. ಇದರಿಂದ ನಗರಗಳಿಗೆ ವಲಸೆ ಹೋಗುವವರ ಸಂಖ್ಯೆ ಕಡಿಮೆಯಾಗಿ ಗ್ರಾಮ ಸಂಸ್ಕೃತಿ ಅಭಿವೃದ್ಧಿ ಹೊಂದಲು ಅನುವಾಗುವದು. ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಬಂದ ಯುವಕರು ತಮಗೆ ಜನ್ಮ ಕೊಟ್ಟ ತಂದೆ-ತಾಯಂದಿರನ್ನು ಕ್ರಮೇಣವಾಗಿ ಮರೆಯುವ ಸಾಧ್ಯತೆ ಹೆಚ್ಚಾಗಿರುವುದರಿಂದ-ಅಂಥವರಿಗೆ ವೃದ್ಧಾಶ್ರಮಗಳನ್ನು ಸರ್ಕಾರ ಹಾಗೂ ಸರ್ಕಾರದಿಂದ ಅನುದಾನ ಪಡೆದ ಸಂಸ್ಥೆಗಳ ಉಸ್ತುವಾರಿಯಲ್ಲಿ ನಡೆಯುವಂತಿರಬೇಕು.

ಮುಕ್ತ ವಿಶ್ವವಿದ್ಯಾಲಯಗಳ ಸ್ಥಾಪನೆಯಂತಹ ಕಲ್ಪನೆ ಮುಕ್ತಾಯವಾಗುವದೇ ಸರಿ. ಬದಲಾಗಿ ಈಗಿರುವ ವಿಶ್ವವಿದ್ಯಾಲಯಗಳ ನವೀಕರಣ. ಅಂದರೆ ಅವುಗಳಲ್ಲಿ ಅಮೂಲಾಗ್ರ ಬದಲಾವಣೆ ಮಾಡಿ, ಗಣಕ ವಿಜ್ಞಾನ (Computer Science) ಸಂಸ್ಥೆಗಳು ಬೆಳೆದು ಕನ್ನಡದ ಬಾವುಟ ವಿಶ್ವದಲ್ಲಿ ಹಾರುವಂತಿರಬೇಕು. ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರುಗಳು ಬೋಧನೆ ಮತ್ತು ಸಂಶೋಧನೆಗೆ ಮೀಸಲಾಗುವಂತೆ ಅವರಿಗೆ ಉತ್ತಮ ದರ್ಜೆಯ ತರಬೇತಿ ನೀಡುವ ಪ್ರತ್ಯೇಕ ಸಂಸ್ಥೆ ಸ್ಥಾಪಿತವಾಗುವದು ಅತೀ ಅವಶ್ಯವೆನಿಸುವಂತಿದೆ. ಪ್ರಾಧ್ಯಾಪಕರು ಕೇವಲ ಬೋಧನೆ ಮತ್ತು ಸಂಶೋಧನೆಗೆ ಸೀಮಿತವಾಗುವ ವ್ಯವಸ್ಥೆ ಜಾರಿಯಲ್ಲಿರಬೇಕು. ಏಕೆಂದರೆ ಶಿಕ್ಷಕರಿಗೆ ಆಡಳಿತಾತ್ಮಕ ಹುದ್ದೆಗಳಿಗೆ ಭರ್ತಿ ನೀಡುವುದರಿಂದ ಅಧಿಕಾರ ದುರುಪಯೋಗದ ಸಾಧ್ಯತೆ ಬಹಳವಿರುವದು. ಅನುಭವದ ಕೊರತೆ ಅದಕ್ಕೆ ಮುಖ್ಯ ಕಾರಣ ಎಂದು ಹೇಳಬಹುದು. ಆಡಳಿತಾತ್ಮಕ ಹುದ್ದೆಗಳಲ್ಲಿರುವ ಪ್ರತಿಭಾವಂತ ಸಂಶೋಧಕರಿಗೆ ನೇರವಾಗಿ ಪ್ರಾಧ್ಯಾಪಕ ಹುದ್ದೆಗಳಿಗೆ ಭರ್ತಿ ನೀಡುವ ವ್ಯವಸ್ಥೆ ಇರಬೇಕು. ಇದರಿಂದ ಶಿಕ್ಷಕ ಮತ್ತು ಶಿಕ್ಷಕೇತರರ ನಡುವಿನ ತಾರತಮ್ಯ ಮಾಯವಾಗುವದು. ಶಿಕ್ಷಕೇತರ ಹುದ್ದೆಗಳಲ್ಲಿರುವ ಸಾವಿರಾರು ನೌಕರರು ಉತ್ತಮ ಕವಿಗಳು, ಸಂಶೋಧಕರು ಹಾಗೂ ಬೋಧಕರೂ ಆಗಿರುವರು. ಆದರೆ ಅವರು ಅವಕಾಶದಿಂದ ವಂಚಿತರಾಗಿರುವರು.

ಭಾರತದ ಮೂಲ ಉದ್ಯೋಗ ಕೃಷಿ. ನಗರೀಕರಣದ ಫಲವಾಗಿ ಬಹಳಷ್ಟು ರೈತರು ಕೃಷಿಯನ್ನು ಮರೆತಂತೆ ಭಾಸವಾಗುತ್ತಿರುವದು. ರೈತರ ಅಭಿವೃದ್ಧಿಗಾಗಿ ಕೃಷಿ ಕೇಂದ್ರಗಳನ್ನು ಸ್ಥಾಪಿಸಿ ತನ್ಮೂಲಕ ಕೃಷಿ ಉತ್ಪನ್ನಕ್ಕೆ ಸಹಾಯ ಮಾಡುವಂತಾಗಬೇಕು. ಅತೀವೃಷ್ಟಿ, ಅನಾವೃಷ್ಟಿ ಮತ್ತು ಚಂಡಮಾರುತಗಳಂತ ತೊಂದರೆಗೆ ಒಳಗಾಗುವ ರೈತರಿಗೆ ಸಕಾಲದಲ್ಲಿ ಆರ್ಥಿಕ ಸಹಾಯ ಮಾಡಲು, ಮತ್ತು ಸಂಕಷ್ಟಕ್ಕೊಳಗಾಗುವ ರೈತರ ರಕ್ಷಣೆಗೆಂದು ಶಾಶ್ವತ ಯೋಜನೆ ಅಸ್ತಿತ್ವದಲ್ಲಿರಬೇಕು.

ಕನ್ನಡಿಗರು ದೇಶದ ಯಾವುದೇ ರಾಜ್ಯದಲ್ಲಿರಲಿ ಅವರ ಅಭಿವೃದ್ಧಿಗಾಗಿ ಈಗಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಂತೆ ಹೊರನಾಡ ಕನ್ನಡಿಗರ ಅಭಿವೃದ್ಧಿಗೆಂದು ಪ್ರತ್ಯೇಕ ಇಲಾಖೆ ಇರಬೇಕು. ದೇಶದ ಪ್ರತಿಯೊಂದು ರಾಜ್ಯದ ರಾಜಧಾನಿಯಲ್ಲಿ ನವದೆಹಲಿಯಲ್ಲಿರುವಂತೆ ಕರ್ನಾಟಕ ಭವನಗಳು ನಿರ್ಮಾಣವಾಗಬೇಕು. ಅಂತಹ ಭವನಗಳಲ್ಲಿ ಆಯಾ ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೇಂದ್ರ ಸರ್ಕಾರದ ಕನ್ನಡ ಹಾಗೂ ಕರ್ನಾಟಕ ಸರ್ಕಾರದ ಅಧಿಕಾರಿಗಳ ಸಮಾನ ಹುದ್ದೆಗಳಿರಬೇಕು. ಈ ಮೂಲಕ ಪ್ರತಿಯೊಂದು ರಾಜ್ಯದಲ್ಲಿರುವ ಕನ್ನಡಿಗರನ್ನು ಗುರುತಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸುವಂತಿರಬೇಕು. ಹೊರ ರಾಜ್ಯಗಳಲ್ಲಿರುವ ಕನ್ನಡಿಗರು ಅವರು ಸರ್ಕಾರ-ಸರ್ಕಾರೇತರ ಸಂಸ್ಥೆಗಳಲ್ಲಿನ ನೌಕರಸ್ಥರಿರಬಹುದು, ಉದ್ಯಮಿಗಳಿರಬಹುದು ಅಥವಾ ಕಾರ್ಮಿಕರಿರಬಹುದು, ಅಂತಹ ಕನ್ನಡಿಗರಿಗೆ ಕರ್ನಾಟಕದಿಂದ ಸಹಾಯ ದೊರೆಯುವಂತಿರಬೇಕು. ಕನ್ನಡಿಗರು ದೇಶದ ಯಾವುದೇ ರಾಜ್ಯದಲ್ಲಿರಲಿ ಅವರಿಗೆ ಕರ್ನಾಟಕದ ಚುನಾಯಿತ ಪ್ರತಿನಿಧಿಗಳನ್ನು (ಎಂ.ಎಲ್.ಎ., ಎಂ.ಪಿ) ಆಯ್ಕೆ ಮಾಡುವ ಅಧಿಕಾರ ಹಾಗೂ ವ್ಯವಸ್ಥೆ ದೊರೆಯುವಂತಿರಬೇಕು. ಆಯಾ ರಾಜ್ಯಗಳ ಕರ್ನಾಟಕ ಭವನದಲ್ಲಿ ಮತದಾನ ಕೇಂದ್ರಗಳ ವ್ಯವಸ್ಥೆ ಮಾಡುವಂತಿರಬೇಕು. ಇದರಿಂದ ಕರ್ನಾಟಕದ ಆಡಳಿತ ನಡೆಸುವ ಸರಿಯಾದ ಪ್ರತಿನಿಧಿಗಳ ಆಯ್ಕೆಯಲ್ಲಿ ಪಾರದರ್ಶಕತೆ ನಿರ್ಮಾಣವಾಗುವದು. "ಹೊರನಾಡ ಕನ್ನಡಿಗರಿಗೆ ಕರ್ನಾಟಕ ಸರ್ಕಾರದಿಂದ ಕನ್ನಡಿಗರ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಒದಗಿಸುವಂತಿರಬೇಕು". ಇದರಿಂದ ಭಾರತದ ರಾಜ್ಯಗಳಲ್ಲಿರುವ ಕನ್ನಡ ಭಾಷಿಕರು ಮತ್ತು ಕರ್ನಾಟಕದಲ್ಲಿರುವ ಒಟ್ಟು ಕನ್ನಡಿಗರ ಸಂಖ್ಯೆ ದೊರೆಯುವದು. ಕರ್ನಾಟಕದಿಂದ ಆಯ್ಕೆಯಾಗಿ ಬರುವ ಸಂಸದ ಸದಸ್ಯರು (ಎಂ.ಪಿ) ವರ್ಷಕ್ಕೆ ಒಮ್ಮೆಯಾದರೂ ದೆಹಲಿ ಹಾಗೂ ಅದರ ಸುತ್ತಲ ಪ್ರದೇಶಗಳ (ಎನ್.ಸಿ.ಆರ್.) ಕನ್ನಡಿಗರ ಸಭೆ ಕರೆದು ಅವರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅದಕ್ಕಾಗಿ ಸಂಸದ ಸದಸ್ಯರಿಗೆ ಕೇಂದ್ರ ಸರ್ಕಾರದಿಂದ ದೊರೆಯುವ ಅಭಿವೃದ್ಧಿ ನಿಧಿಯಲ್ಲಿನ ಕೆಲ ಭಾಗ ಕಾಯ್ದಿಡುವಂತಿರಬೇಕು.

ಹೊರನಾಡ ಕನ್ನಡಿಗರೂ ಕನ್ನಡ ಭಾಷೆ, ಸಂಸ್ಕೃತಿಯ ಬೆಳವಣಿಗೆಗಾಗಿ ದುಡಿಯುವವರೇ ಆಗಿರುವರು. ಕರ್ನಾಟಕದಲ್ಲಿ ಸರಿಯಾದ ಉದ್ಯೋಗ ದೊರೆತಿರಲಿಲ್ಲವಾದ್ದರಿಂದ ಕನ್ನಡಿಗರು ಹೊರನಾಡುಗಳಿಗೆ ಉದ್ಯೋಗ ಹುಡುಕುತ್ತ ಬಂದವರಾಗಿರುವರು. ಕರ್ನಾಟಕದಲ್ಲಿ ಉದ್ಯೋಗ ಸಿಗಲಿಲ್ಲವೆಂದು ತಾಯ್ನಾಡಿನ ಬಗ್ಗೆ ಯಾರಿಗೂ ದ್ವೇಷವಿರುವದಿಲ್ಲ. ಸಾಮಾನ್ಯವಾಗಿ ಎಲ್ಲರ ಮನದಾಳದಲ್ಲಿ ಕನ್ನಡ ಪ್ರೇಮ ಇದ್ದೇ ಇರುವದು. ಹೊರನಾಡ ಕನ್ನಡಿಗರು ತಾವು ವಾಸಿಸುವ ಪ್ರದೇಶದಲ್ಲಿ ಕನ್ನಡ ಭಾಷೆಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಪ್ರಸಾರ ಮಾಡುತ್ತಿರುವುದರಿಂದ ಅಂತಹ ಸಂಸ್ಥೆಗಳಿಗೆ ಕರ್ನಾಟಕ ಸರ್ಕಾರದಿಂದ ಆರ್ಥಿಕ ಸಹಾಯ ಮತ್ತು ಕರ್ನಾಟಕದ ಸಾಂಸ್ಕೃತಿಕ ಕಾರ್ಯಕ್ರಮಗಳು ಆಗಾಗ ದೊರೆಯುವಂತಿರಬೇಕು.



**ಡಾ. ಜಿ.ಎ. ಬಿರಾದಾರ**

ವಿಶೇಷ ಲೇಖನ

# ನನ್ನ ಕನಸಿನ ಕರ್ನಾಟಕ

"ಕಾವೇರಿಯಿಂದ ಗೋದಾವರಿ ವರೆ ಮಿರ್ದ. . . ." ಎಂಬ ಈ ಕವಿ ಯುಕ್ತಿ ಯಾವಾಗ ನನಸಾದೀತೋ ಎಂಬುದೇ ನನ್ನ ಕನಸು. ಕರ್ನಾಟಕದ ಪ್ರದೇಶಗಳನ್ನು ಕಿತ್ತುಕೊಳ್ಳಲು ಹಾತೊರೆಯುತ್ತಿರುವ ನೆರೆ ರಾಜ್ಯಗಳು ಸಮಾಧಾನಕರ ಒಪ್ಪಂದ ಕಂಡುಕೊಂಡು ಶಾಂತಿ ನೆಲೆಸುವಲ್ಲಿ ಸಹಕಾರ ನೀಡಬೇಕು. ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ನೆಲೆಸಿದ ಕನ್ನಡಿಗರು ಸೌಹಾರ್ಧತೆಯಿಂದ ಬಾಳಬೇಕು. ಯಾರೂ ಯಾವುದೇ ಭಾಗದ ಅಂದರೆ ಉತ್ತರ ಕರ್ನಾಟಕದ ಕನ್ನಡಿಗರು ಮೈಸೂರು ಕನ್ನಡವನ್ನು; ಮೈಸೂರು ಕನ್ನಡಿಗರು ದಕ್ಷಿಣ ಕನ್ನಡವನ್ನು ಗೇಲಿ ಮಾಡುವುದನ್ನು ಮೊದಲು ನಿಲ್ಲಿಸಬೇಕು. ಕರ್ನಾಟಕದ ಎಲ್ಲಾ ಭಾಗಗಳ ಕನ್ನಡಕ್ಕೂ ಅದರದೇ ಆದ ಸೊಗಡಿದೆ. ಯಾವುದೇ ಭಾಗದ ಒಂದು ಕನ್ನಡ ಶ್ರೇಷ್ಠವೆಂದು ಹೇಳುವುದು ತುಂಬಾ ಕಷ್ಟಕರ. ಕರ್ನಾಟಕದ ಎಲ್ಲಾ ಭಾಗಗಳ ಆಡುಭಾಷೆಗಳಿಗೆ ಅವುಗಳದೇ ಆದ ವೈಶಿಷ್ಟ್ಯತೆ ಇದೆ. ಆಯಾ ಭಾಗಗಳ ಭಾಷೆಯು ಬದಲಾವಣೆಗೊಳ್ಳುವುದು ಬೆಳೆಯುವುದು ಮತ್ತು ಉಳಿಯುವುದಕ್ಕೆ ಅಲ್ಲಿನ ಪರಿಸರ, ಸಂಸ್ಕೃತಿ, ನೈಸರ್ಗಿಕ ಸಂಪತ್ತು, ಬೇರೆ ಸಂಸ್ಕೃತಿಗಳ ಅಂದರೆ ನೆರೆ ರಾಜ್ಯಗಳ ಭಾಷೆಗಳು ಹಾಗೂ ಜನರೇ ಕಾರಣ. ಒಂದು ಜನಾಂಗದ ಭಾಷೆಯ ಶಬ್ದ ಬಂಡಾರ ಬೆಳೆಯುವುದೂ ಕೂಡಾ ವಿವಿಧ ಸಂಸ್ಕೃತಿ-ಜನಾಂಗಗಳ ಸಮ್ಮಿಳನದಿಂದಲೇ. ಕರ್ನಾಟಕದ ಎಲ್ಲ ಭಾಗಗಳ ಆಡು ಭಾಷೆಯ ಶಬ್ದಗಳನ್ನೂ ಸೇರಿಸಿದ ಶಬ್ದಕೋಶವೊಂದನ್ನು ರಚಿಸುವ ಅಗತ್ಯತೆ ಇದೆ. ಇಂತಹ ಅಘಾದ ಶಬ್ದ ಭಂಡಾರವನ್ನು ಹೊಂದಿದ ಸಮಗ್ರ ಕರ್ನಾಟಕದ ಕನ್ನಡ ಒಂದೇ ಎನ್ನುವ ಭಾವನೆ ನಮ್ಮಲ್ಲಿ ಮೂಡಬೇಕು. ಒಂದು ಭಾಗದ ಜನರ ಸಂಸ್ಕೃತಿ ಹಾಗೂ ಆಡುವ ಕನ್ನಡವನ್ನು ಇನ್ನೊಂದು ಭಾಗದ ಕರ್ನಾಟಕದ ಜನರು ಸನ್ಮಾನಿಸಬೇಕು. ಆಡಿ ಕೊಳ್ಳುವುದಾಗಲಿ ಗೇಲಿ ಮಾಡುವುದಾಗಲೀ ಮಾಡಬಾರದು. ಇದರಿಂದ ಆಡು ಭಾಷೆ ಪರಿವರ್ತನೆಗೊಂಡು ಶಬ್ಧ ಭಂಡಾರ ಬಡವಾಗುವ ಸಾಧ್ಯತೆ ಇದೆ. ಒಟ್ಟಾರೆ ಜಗತ್ತಿನ ಪುರಾತನ ಭಾಷೆಗಳಲ್ಲೊಂದಾದ, ತನ್ನದೇ ಆದ ಲಿಪಿ ಹೊಂದಿದ ಕನ್ನಡ ಭಾಷೆಗೆ ಕನ್ನಡ-ಸಾಹಿತ್ಯಕ್ಕೆ ಜಾಗತಿಕ ಭಾಷೆಗಳ ಪಟ್ಟಿಯಲ್ಲಿ ಅಗ್ರ ಸ್ಥಾನ ದೊರಕಿಸುವಲ್ಲಿ ನಾಡಿನ ಜನತೆ ಸಹಕರಿಸಬೇಕು. ಈ ನನ್ನ ಕನಸು ನನಸಾಗಬೇಕು.


ಉತ್ತರ ಕರ್ನಟಕದಲ್ಲಿ ಒಂದು ಕಾಲದಲ್ಲಿ ಪ್ರಚಲಿತವಿದ್ದ ಸಣ್ಣಾಟ, ದೊಡ್ಡಾಟ, ಗೀಗೀ ಪದ, ಬುಡುಬುಡುಕೆ, ಕೊರವಂಜಿ ಆಟ, ಮೋಡಿ ಆಟಗಾರರು ಮತ್ತು ಇನ್ನೂ ಅನೇಕ ಜಾನಪದ ಪ್ರಾಕಾರಗಳಿಗೆ ಸರಿಯಾದ ಪ್ರೋತ್ಸಾಹ ಸಿಗದೆ ಹೋಗಿ ನಶಿಸಿ ಹೋಗುತ್ತಿವೆ. ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತವಿದ್ದ ಯಕ್ಷಗಾನಕ್ಕೆ ಸಾಕಷ್ಟು ಪ್ರಚಾರ ಪ್ರೋತ್ಸಾಹನೆ ದೊರಕಿದೆ. ಆದರೆ ಅದೇ ರೀತಿಯ ಪ್ರೋತ್ಸಾಹನೆ ಸರಕಾರಿ ಮನ್ನಣೆ, ಸಮಗ್ರ ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರಚಲಿತ ಇರುವ ಎಲ್ಲ ಜನಪದ ಪ್ರಾಕಾರಗಳಿಗೂ ದೊರಕಬೇಕು. ಕಂಸಾಳೆ, ಪುರವಂತರ ಕುಣಿತ, ಡೊಳ್ಳು ಕುಣಿತಗಳಿಗೆ ಇತ್ತೀಚೆಗೆ ದೊರೆತ ರಾಷ್ಟ್ರೀಯ-ಅಂತಾರಾಷ್ಟ್ರೀಯ ಪ್ರದರ್ಶನಾವಕಾಶ ಬೀಸುವಕಲ್ಲಿನ ಪದಗಳು, ಕೋಲಾಟ, ಮರಗೋಲಾಟ, ಹೆಜ್ಜೆಮೇಳ, ಗ್ರಾಮೀಣ ಭಜನಾ ಮಂಡಳಿಗಳಿಗೂ ದೊರಕಬೇಕು. ಅಳಿದು ಹೋಗುತ್ತಿರುವ ಜನಪದ ಕಲೆ-ಸಂಸ್ಕೃತಿಯ ಪ್ರಾಕಾರಗಳಿಗೆ ಸರ್ಕಾರದಿಂದ ಉಚಿತ ಪ್ರೋತ್ಸಾಹನೆ ದೊರಕಿ ಅವುಗಳು ಮೂಲ ರೂಪದಲ್ಲಿಯೇ ಉಳಿದುಕೊಂಡು ಮುಂದುವರೆಯುವಲ್ಲಿ ಎಲ್ಲರೂ ಶ್ರಮಿಸಬೇಕಾಗಿದೆ. ಇಂಥ ಸುಂದರ ವೈವಿಧ್ಯಮಯ ಕರ್ನಾಟಕದ ಪರಿಚಯವನ್ನು ಜಗತ್ತಿಗೆ ನೀಡಬೇಕೆಂಬುದು ನನ್ನ ಕನಸು.

ಮುಖ್ಯವಾಗಿ ಶಾಸಕತ್ವದ ಭಾರ ಹೊತ್ತಿರುವ ನಾಯಕರು ಯಾವುದೇ ತಾರತಮ್ಯವೆಸಗದೇ ಸಮಗ್ರ ಕರ್ನಾಟಕದ ಉನ್ನತಿಗೆ ಸದಾ ಶ್ರಮಿಸಬೇಕು. ಶೈಕ್ಷಣಿಕ ಕ್ಷೇತ್ರಕ್ಕೆ ನಮ್ಮ ನಾಡಿನ ಧಾರ್ಮಿಕ ಸಂಸ್ಥೆಗಳ ಕೊಡುಗೆ ಅಪಾರವಾದುದಾಗಿದೆ. ಕರ್ನಾಟಕದಲ್ಲಿ ತಲೆಯೆತ್ತಿರುವ ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆ ಹಾಗೂ ಗುಣಮಟ್ಟದಲ್ಲಿ ದೇಶದ ಇನ್ನಾವುದೇ ರಾಜ್ಯಕ್ಕಿಂತ ಉತ್ತಮ ಸ್ಥಾನದಲ್ಲಿವೆ ಎಂದು ಹೇಳಬಹುದು. ರಾಜ್ಯ ಸರ್ಕಾರದ ವಿವಿಧ ಪ್ರಾಧಿಕಾರಗಳು ಪ್ರಾಂತೀಯತೆಯ ಮನೋಭಾವದಿಂದ ಹೊರಬಂದು ಕರ್ನಾಟಕ ರಾಜ್ಯದ ಎಲ್ಲಾ ಪ್ರಾಂತಗಳ ಸಮಗ್ರ ಅಭಿವೃದ್ಧಿಗೆ ಸಹಾಯ ಹಸ್ತ ನೀಡಬೇಕು. ವಿವಿಧೊದ್ಯಮಿಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಬೇಕು. ಮುಖ್ಯವಾಗಿ ಗಡಿ ಪ್ರದೇಶಗಳಲ್ಲಿನ ಉದ್ಯಮಿಗಳಿಗೆ ರಾಜ್ಯದಿಂದ ಯೋಗ್ಯ ಮನ್ನಣೆ ದೊರಕಿಸಿ ಕೊಡಬೇಕು. ಕರ್ನಾಟಕದ ಗಡಿ ಭಾಗದಲ್ಲಿರುವ ಅಥಣಿಯಲ್ಲಿ ತಯಾರಾದ ಚಪ್ಪಲಿಗಳು ಇಂದು ದೇಶ-ವಿದೇಶಗಳಲ್ಲಿ ಕೊಲ್ಹಾಪುರ ಚಪ್ಪಲಿ ಎಂದು ಪ್ರಸಿದ್ಧಿ ಪಡೆದು ಮರಾಟಗೊಳ್ಳುತ್ತಿರುವುದನ್ನು ನೋಡಿದರೆ ಕಸಿವಿಸಿಯಾಗುತ್ತದೆ. ಇದರಂತೆಯೇ ರಬಕವಿ-ಬನಹಟ್ಟಿ ಹುಬ್ಬಳ್ಳಿಗಳಲ್ಲಿ ತಯಾರಾಗುತ್ತಿರುವ ಸೀರೆಗಳು ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಹಾರಾಷ್ಟ್ರದ ಸೀರೆಗಳೆಂದು ಮಾರಲ್ಪಡುತ್ತವೆ. ಮೈಸೂರಿನ, ರೇಷ್ಮೆ ಸೀರೆಗಳಿಗೆ ಸರ್ಕಾರದಿಂದ ದೊರೆತ ಪ್ರೋತ್ಸಾಹನೆ ಬೀದರಿನ 'ಬಿದರಿ ಕೈಗಾರಿಕೆ' (ಬೆಳ್ಳಿಯ ಪಚ್ಚಿಕಾರಿ / ಇನ್‌ಲೇ) ಗೆ ಸಿಕ್ಕದೇ ಹೋಗಿವೆ. ಹೆಚ್ಚಿನ ಕುಶಲ ಕರ್ಮಿಗಳು ಹೈದರಾಬಾದಿಗೆ ವಲಸೆ ಹೋಗಿ ಆಂಧ್ರಪ್ರದೇಶವು ಹೆಸರುಗಳಿಸುತ್ತಿದೆ. ಕನಿಷ್ಠ ಪಕ್ಷ ರಾಜ್ಯ ಸರ್ಕಾರದಿಂದ ಇಂತಹ ತಪ್ಪುಗಳು ನಡೆದು ನನ್ನ ಕನಸಿನ ಕರ್ನಾಟಕದ ಔದ್ಯೋಗಿಕ ಮುನ್ನಡೆ ಕುಂಠಿತವಾಗದಿರಲಿ.

ಇತ್ತೀಚೆಗೆ ರಾಜ್ಯದಲ್ಲಿನ ಹೆದ್ದಾರಿಗಳು ಉತ್ತಮಗೊಂಡಿವೆ. ಆದರೆ ರೈಲು ಮಾರ್ಗಗಳ ಅಭಿವೃದ್ಧಿಯಲ್ಲಿ ಹೆಚ್ಚಿನ ಬದಲಾವಣೆ ಕಂಡು ಬರುತ್ತಿಲ್ಲ. ಗಡಿನಾಡ ಜಿಲ್ಲೆ ಬೆಳಗಾವಿಯನ್ನು ಕೇವಲ 48 ಕಿ.ಮೀನಷ್ಟು ರೈಲು ಹಳಿ ಹಾಕಿ ಧಾರವಾಡ ಹುಬ್ಬಳ್ಳಿಗೆ ಜೋಡಿಸುವ ಕನಸು ಬಹಳ ದಿನಗಳಿಂದ ಕನಸಾಗಿಯೇ ಉಳಿದಿದೆ. ಮಂಗಳೂರಿನಲ್ಲಿ ಒಂದು ಅಂತಾರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣಕ್ಕೆ ಬೇಕಾಗುವಷ್ಟು ಸಮತಳ ಪ್ರದೇಶವಿಲ್ಲದಿದ್ದಾಗ್ಯೂ ವಿಮಾನ ನಿಲ್ದಾಣ ನಿರ್ಮಾಣಗೊಳಿಸಿದ್ದು ಸರಿಯೇ? ಕರ್ನಾಟಕದ ದಕ್ಷಿಣದ ತುದಿ ಬೆಂಗಳೂರಿನಲ್ಲಿದ್ದ ವಿಮಾನ ನಿಲ್ದಾಣದ ಮಟ್ಟಕ್ಕೆ ಸರಿದೂಗುವ ಇನ್ನೊಂದು ವಿಮಾನ ನಿಲ್ದಾಣವನ್ನು ಕರ್ನಾಟಕದ ಉತ್ತರ ಭಾಗದಲ್ಲಿ ಅಂದರೆ ಹುಬ್ಬಳ್ಳಿಯಲ್ಲಿ ನಿರ್ಮಿಸಬೇಕಿತ್ತಲ್ಲವೆ? ಬಹುಶಃ ಮೊನ್ನೆ ನಡೆದ ವಿಮಾನ ದುರಂತ ತಪ್ಪುತ್ತಿತ್ತೇನೋ? ಇನ್ನಾದರೂ ಆಯ್ಕೆಗೊಂಡು ಆಡಳಿತ ನಡೆಸುವ ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರು, ತಮ್ಮನ್ನು ಆಯ್ಕೆಗೊಳಿಸಿದ ಕ್ಷೇತ್ರಕ್ಕೆ ಅಭಿವೃದ್ಧಿ ಕಾರ್ಯಗಳನ್ನು ಸೀಮಿತಿಗೊಳಿಸದೇ ಸಮಗ್ರ ಕರ್ನಾಟಕದ ಪ್ರತಿನಿಧಿಗಳು ತಾವೆಂದು ಭಾವಿಸಿ ಕರ್ನಾಟಕಕ್ಕೆ ಎಲ್ಲಾ ಭಾಗಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಶ್ರಮಿಸುವಂತಾಗಬೇಕು. ಅಧಿಕಾರಿಗಳು ಪೂರ್ವಾಗ್ರಹ ಪೀಡೆಗಳಿಗೆ ಒಳಗಾಗದೇ, ಉತ್ತಮ-ಕೂಲಂಕುಶ ವಿವೇಚನೆಗೊಳಪಡ ಯೋಜನೆಗಳನ್ನು ಸಿದ್ಧಪಡಿಸಿ ಶ್ರದ್ದೆ-ಸಮರ್ಪಣಾ ಮನೋಭಾವದಿಂದ ನಾಡಿನ ಕಲ್ಯಾಣಕ್ಕಾಗಿ ಕಾರ್ಯಗತಗೊಳಿಸುವಂತಾಗಲಿ ಎಂಬುದು ನನ್ನ ಕನಸು.

ಸಹನಶೀಲತೆ-ಕರುಣೆಗೆ-ಸೌಹಾರ್ದತೆಗೆ ಹೆಸರಾದ ಕನ್ನಡ ಜನತೆ ಈ ಗುಣವನ್ನು ಸದಾಕಾಲ ಉಳಿಸಿಕೊಂಡಿರಲಿ. ಕೊಟ್ಟ ಮಾತಿಗೆ ತಪ್ಪದ-ಸತ್ಯ ನಿಷ್ಠೆಯುಳ್ಳ ಜೊತೆಗೆ ಕಾರುಣಾಮಯಿಗಳು ಆಗಿರುವ ಕನ್ನಡ ಜನತೆಯ ಉತ್ತಮ ಗುಣಗಳು ಮರೆಯಾಗದಿರಲಿ. ಪರಿಧರ್ಮ ಪರಭಾಷೆ ಸಹಿಷ್ಣುಗಳಾದುದರಿಂದಲೇ ಅಲ್ಲದೇ ಗಡಿ ಭಾಗಗಳಲ್ಲಿನ ಭಾಷಾ ಗೊಂದಲಗಳೆದ್ದಿರುವುದು? ನಮ್ಮ ಉತ್ತಮ ಗುಣಗಳಿಂದಲೇ ನೆರೆ ರಾಜ್ಯಗಳ ಜನರ ಮನಸ್ಸು ಬದಲಾಯಿಸುವ ಪ್ರಯತ್ನ ಮಾಡಬೇಕಾಗಿದೆ. ಕರ್ನಾಟಕ ರಾಜ್ಯದ ಗಡಿಭಾಗಗಳು ನೆರೆರಾಜ್ಯಗಳಿಗೆ ಹಂಚಿ ಹೋಗದಂತೆ ಕಾಪಾಡಿಕೊಳ್ಳಬೇಕಾಗಿದೆ. ನಮ್ಮ ಭಾಷೆಯನ್ನು ಇನ್ನಷ್ಟು ಸಮೃದ್ಧಿಗೊಳಿಸಿಕೊಳ್ಳೋಣ. ಭಾಷೆಯ ಪ್ರತಿ ಪ್ರೀತಿ, ಅಭಿಮಾನ ವೃದ್ಧಿಸಲಿ. ಆದರೆ ಪರಭಾಷೆಯ ಮೇಲೆ ಅದರಲ್ಲೂ ನೆರೆ ರಾಜ್ಯಗಳ ಭಾಷೆಯ ಮೇಲೆ ದ್ವೇಶ ಬೆಳೆಯದಿರಲಿ. ಕನ್ನಡ ಭಾಷೆ ಹಾಗು ಕರ್ನಾಟಕದ ಅಭಿವೃದ್ಧಿಗೆ ಕನ್ನಡೇತರರು ಕೂಡ ಸಾಕಷ್ಟು ಶ್ರಮಿಸಿದ್ದಾರೆ. ಕನ್ನಡ ನಾಡು-ನುಡಿಯನ್ನು ಮೆಚ್ಚಿಕೊಂಡು ಕರ್ನಾಟಕವನ್ನೇ ತಾಯ್ನಾಡಾಗಿ ಸ್ವೀಕರಿಸಿದ್ದಾರೆ. ಅವರೆಲ್ಲರನ್ನೂ ಗೌರವದಿಂದ ನೋಡಬೇಕಾದುದು ಸೌಜನ್ಯತೆ. ಈ ಸೌಜನ್ಯತೆ ಸದಾ ನಮ್ಮದಾಗಿರಲಿ.

ನಾನು ಚಿಕ್ಕವನಾಗಿದ್ದಾಗ ನನ್ನ ತಾಯಿ ಹೇಳುತ್ತಿದ್ದರು ನಾವು ಹಗಲು ಕಂಡ ಕನಸುಗಳು ನನಸಾಗುತ್ತವೆ ಎಂದು. ಅಂತೆಯೇ ನಾನು ಕರ್ನಾಟಕ ಕುರಿತು ಕಂಡ ಈ ಕನಸನ್ನು ಹಗಲುಗನಸೆಂದು ಭಾವಿಸುತ್ತೇನೆ.



ಚೆನ್ನು ಎಸ್. ಮಠದ

# ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗೆ ಸುವರ್ಣ ಮಹೋತ್ಸವ





ದಿನಾಂಕ 17.10.2010ರಂದು ದೆಹಲಿ ಕನ್ನಡ ಶಾಲೆಯಲ್ಲಿ ಬಹು ಸಂಭ್ರಮದ ದಿನ. ಅಂದು ನವರಾತ್ರಿಯ ಒಂಭತ್ತು ದಿನಗಳು ದುರ್ಗಾದೇವಿ (ನಾಡದೇವಿ)ಯ ವ್ರತ, ನಿಯಮ, ನಂದಾದೀಪ, ಬಗೆಬಗೆಯ ಕಾರ್ಯಕ್ರಮ, ಪ್ರವಚನ ಇತ್ಯಾದಿಗಳಿಂದ ದೇವತೆಯ ಒಂಭತ್ತು ಅವತಾರಗಳನ್ನು ಆರಾಧಿಸಿದ ನಂತರ ದಸರಾ ಹಬ್ಬದ "ವಿಜಯ ದಶಮಿ"ಯ ಪವಿತ್ರ ದಿನ. ಅಂದೇ ದೆಹಲಿ ಕನ್ನಡ ಶಾಲೆಗೆ 50ನೇ ವರ್ಷದ ಹುಟ್ಟುಹಬ್ಬದ ದಿನ ಎಂದರೂ ತಪ್ಪಾಗಲಿಕ್ಕಿಲ್ಲ. "ಸುವರ್ಣ ಮಹೋತ್ಸವ"ವನ್ನು ಆಚರಿಸಲು ಶಾಲೆಯನ್ನು ವಿವಿಧ ಹೂ, ಎಲೆ, ಹಾರ ಇತ್ಯಾದಿಗಳಿಂದ ಸಿಂಗರಿಸಿ ಎಲ್ಲರೂ ವಿಧವಿಧದ ಬಟ್ಟೆ ತೊಟ್ಟು ಚಿನ್ನದ ಆಭರಣ (ಇದ್ದವರು) ಧರಿಸಿ ಸಂತೋಷದಿಂದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದನ್ನು ನೋಡುವುದೇ ಒಂದು ವಿಹಂಗಮ ನೋಟ.

ಪ್ರಥಮವಾಗಿ ವಿದ್ಯಾಧಿ ದೇವತೆಯಾದ "ಸರಸ್ವತಿ ದೇವಿಯ" ಪೂಜೆಯನ್ನು ಸಾಂಪ್ರದಾಯಿಕ ರೀತಿಯಿಂದ ನೆರವೇರಿಸಿ, ಎಲ್ಲರಿಗೂ ಕುಂಕುಮಾರ್ಚನೆ ಮಾಡಲು ಅವಕಾಶ ಕೊಟ್ಟು, ಪ್ರಸಾದ ವಿತರಿಸಿದರು. ಜ್ಯೋತಿ ಬೆಳಗಿಸುವ ಮುಖಾಂತರ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು.

ಶಾಲೆಯ ಅಧ್ಯಕ್ಷರಾದ ಶ್ರೀ ಜಿ.ಎಂ. ಲಿಂಗರಾಜುರವರು ಉಪಾಧ್ಯಕ್ಷರಾದ ಡಾ. ಅಹಲ್ಯಾ ಚಿಂತಾಮಣಿಯವರು, ಕೋಶಾಧ್ಯಕ್ಷರಾದ ಶ್ರೀ ಬಸವರಾಜ ಎಸ್. ಮೇಟಿಯವರು ಶ್ರೀ ಕೆ.ಐ. ಭಟ್ ಹಾಗು ಪ್ರಭಾರಿ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶರವರು, ಡಾ. ಎಸ್. ರಾವ್ ಅವರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಿದ್ದರು.

ಪ್ರಥಮವಾಗಿ ಅತಿಥಿಗಳ ಸ್ವಾಗತವನ್ನು ಶ್ರೀ ಕೆ.ಐ. ಭಟ್‌ರವರು ಮಾಡಿದರು. ನಂತರ ಡಾ. ಅಹಲ್ಯಾಚಿಂತಾಮಣಿಯವರು ಶಾಲೆಯ ಉಪಾಧ್ಯಕ್ಷರಾಗಿದ್ದು ಶಾಲೆಯ ಪ್ರಾರಂಭದ ವರ್ಷದಲ್ಲಿ ಶ್ರೀ ಬಿ.ಡಿ. ಜತ್ತಿಯವರು, ಶ್ರೀ ರಾಜೀವ ಗಾಂಧಿಯವರು, ಶ್ರೀ ಎಸ್. ಬಂಗಾರಪ್ಪನವರು, ಶ್ರೀ ರಾಮಕೃಷ್ಣ ಹೆಗಡೆಯವರು, ಶ್ರೀಮತಿ ಮೊಹಸಿನಾ ಕಿದ್ವಾಯಿ, ಶ್ರೀಮತಿ ಸರೋಜಿನಿ ಮಹಿಷಿಯರಂತಹ ಮಹಾನ್ ರಾಜಕೀಯ ಹಾಗೂ ಹಿರಿಯ ಅಧಿಕಾರವರ್ಗದ ಮುಖಂಡರು ಪ್ರಯತ್ನಪಟ್ಟು, ಸಹಾಯ ಹಸ್ತ ನೀಡಿ, ಶ್ರೀ ಎಸ್.ವಿ. ಕೃಷ್ಣಮೂರ್ತಿರಾವ್‌ರವರ ಅಧ್ಯಕ್ಷತೆಯಲ್ಲಿ ಶಾಲೆಯನ್ನು ಕೇವಲ ಕೆಲವೇ 'ವಿದ್ಯಾರ್ಥಿಗಳ ಉಪಸ್ಥಿತಿಯಲ್ಲಿ ಪ್ರಾರಂಭ ಮಾಡಿ ಬೆಳೆದು ಬಂದ ವಿಷಯ'ಗಳನ್ನೆಲ್ಲ ಹಂತ ಹಂತವಾಗಿ ವಿವರಿಸಿದರು. ನಂತರ ಪ್ರಾರಂಭದ ಹಂತದಲ್ಲಿ ಕಡಿಮೆ ಸಂಬಳದಲ್ಲಿ ಅತ್ಯಂತ ಜಾಣರು, ಪ್ರತಿಭಾಶಾಲಿಗಳಾದ ಕೆಲವು ಗುರುಗಳು ಕೇವಲ ತ್ಯಾಗ ಹಾಗು ಸೇವಾಮನೋಭಾವನೆಯಿಂದ ಕಾರ್ಯ ಮಾಡಿ ಶಾಲೆಯ ಉನ್ನತಿಗಾಗಿ ಶ್ರಮಿಸಿದಂತಹ ಗುರುಗಳನ್ನು ಆಹ್ವಾನಿಸಿದ್ದರು. ಹಾಗೂ ಪ್ರಾರಂಭದ ಹಂತದಲ್ಲಿ ಕನ್ನಡ ಶಾಲೆಯಲ್ಲಿ ವಿದ್ಯಾರ್ಥಿಗಳಾಗಿ ಸೇರಿ ಶಿಕ್ಷಣ ಪೂರೈಸಿ ಅತ್ಯಂತ ಉನ್ನತ ಹುದ್ದೆಗೇರಿದವರನ್ನು ಗುರುತಿಸಿ ಅವರೆಲ್ಲರನ್ನು ಆಹ್ವಾನಿಸಿ, ಸನ್ಮಾನ ಮಾಡಿದರು. ಅವರೆಲ್ಲರೂ ತಮ್ಮ ಅನುಭವವನ್ನು ಹೇಳಿ ತಮ್ಮನ್ನು ಗುರುತಿಸಿ, ಆಹ್ವಾನಿಸಿ, ಗೌರವಿಸಿದ್ದಕ್ಕಾಗಿ ನಮ್ರತೆಯಿಂದ, ಆಭಾರಿಯಾಗಿದ್ದೇವೆ ಎಂದು ಹೇಳಿದರು.

ದೆಹಲಿ ಕನ್ನಡ ಶಾಲೆಯನ್ನು ಸ್ಥಾಪಿಸುವಾಗ, ಗುದ್ದಲಿ ಪೂಜೆಯನ್ನು ಮಾಡಿದಾಗ ಉಪಸ್ಥಿತರಿದ್ದ ಎಷ್ಟೊ ಜನ ಈಗ ಕಣ್ಮರೆಯಾಗಿದ್ದಾರೆ, ಕೆಲವರು ಬೇರೆ ಬೇರೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ, ವಿಶೇಷವೆಂದರೆ ಶ್ರೀಮತಿ ಸಾವಿತ್ರಿ ಶಾಸ್ತ್ರಿಯವರು ಹಿರಿಯರು, ಉಪಸ್ಥಿತರಿದ್ದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಂತಹವರನ್ನು ಆಡಳಿತ ಮಂಡಳಿಯವರು ಗುರುತಿಸಿ ದಿಲ್ಲಿಯಲ್ಲಿಯ ಉಪಸ್ಥಿತರಿರುವ ಅವರನ್ನು ಸನ್ಮಾನಿಸಲಾಯಿತು. ಇದು ಒಂದು ಅವಿಸ್ಮರಣೀಯ ದಿನವೆಂದು ಅವರು ತಮ್ಮ ಮಾತುಗಳಲ್ಲಿ ಸಂತೋಷ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾದ ಡಾ. ಎಸ್. ಆರ್. ರಾವ್‌ರವರು ಮಾತನಾಡುತ್ತಾ, ಭಾರತದಲ್ಲಿ ಅನೇಕರು ಅತ್ಯುತ್ತಮ ಹುದ್ದೆಯಲ್ಲಿದ್ದಾರೆ. ಅವರ ಕುಟುಂಬದಲ್ಲಿ ಅವರ ತಾಯಿ, ತಂದೆಯವರು ಹೇಳಿದ್ದು ಏನೆಂದರೆ ಮೊದಲನೆಯದು 1. ಜೆನೆಟಿಕ್ಸ್ (ಹುಟ್ಟಿದಾಗಿನಿಂದ ತಾಯಿ, ತಂದೆಯವರಿಂದ ಬರುವ ವಂಶವಾಹಿನಿಗಳ ಪ್ರಭಾವ). 2. ಶಿಕ್ಷಣ 3. ಸಂಸ್ಕೃತಿ. ಹೀಗೆ ಈ ಮೂರು ಇದ್ದರೆ, ಆ ವ್ಯಕ್ತಿ ಎಲ್ಲ ಕ್ಷೇತ್ರಗಳಲ್ಲಿ ಮುಂದುವರಿಯುತ್ತಾನೆ. ಅಥವಾ ವಿಶೇಷ ಒಂದು ಕ್ಷೇತ್ರದಲ್ಲಿ ಪ್ರಗತಿ ಸಾಧಿಸುತ್ತಾರೆ. ಆದರೆ, ಕೆಲವರು ತಮ್ಮ ತಪ್ಪನ್ನು ತಿಳಿದುಕೊಳ್ಳದೆ, ಬೇರೆಯವರಿಗೆ ಅಪವಾದ ಕೊಡುತ್ತಾರೆ ಎಂದರು. ಈಗಿನ ವೈಜ್ಞಾನಿಕ ಹಾಗೂ ತಾಂತ್ರಿಕ ಯುಗದಲ್ಲಿ ವಿಶ್ವ ಬಹಳ ತೀವ್ರ ಗತಿಯಲ್ಲಿ ಪ್ರಗತಿ ಹೊಂದುತ್ತಿದೆ. ಫ್ಲಾಪಿ, ಹೋಗಿ ಸಿ.ಡಿ. ಬಂದಿತು. ಹಾಗೇ ಮುಂದುವರೆದು ಪೆನ್‌ಡ್ರೈವ್ ಬಂದಿತು. ಡಾ. ಚಂದ್ರಶೇಖರ, ಹರಗೋವಿಂದ ಖುರಾನಾ ಹೀಗೆ ಅನೇಕ ಶ್ರೇಷ್ಠ ವಿಜ್ಞಾನಿಗಳು ಭಾರತದಲ್ಲಿ ಇದ್ದಾರೆ. ತಾವು ಜಪಾನಕ್ಕೆ ಹೋದಾಗ ಅಲ್ಲಿಯ ಮುಂದುವರಿದ ವಿಜ್ಞಾನ ನೋಡಿ ಸಂತೋಷವಾಯಿತು ಎಂದರು. ಆದರೆ, ಭಾರತವನ್ನು ಹೋಲಿಸಿದರೆ, ಅನೇಕ ಶ್ರೇಷ್ಠ ಜ್ಞಾನಿಗಳಿಗೆ ಅವಕಾಶ ಸಿಗುತ್ತಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು. ಇಂತಹ ಶಾಲೆಗಳ ಮುಖಾಂತರ ವೈಜ್ಞಾನಿಕ ಕ್ಷೇತ್ರದಲ್ಲಿ ಹೆಚ್ಚು ಉತ್ತಮ ಶಿಕ್ಷಣ ಸಿಗುವ ವ್ಯವಸ್ಥೆ ಮಾಡಿ ಅತ್ಯುತ್ತಮ ವಿದ್ಯಾರ್ಥಿಗಳನ್ನು ರಚಿಸುವ ಕಾರ್ಯದಲ್ಲಿ ಪ್ರಗತಿ ಆಗಬೇಕು ಎಂದು ಆಶಿಸಿದರು. ಮತ್ತು ಸರ್ಕಾರದಿಂದ ಕೂಡಾ ಅನೇಕ ಸವಲತ್ತುಗಳು ಸಿಗುತ್ತಿವೆ. ಅದರ ಪ್ರಯೋಜನ ಪಡೆದುಕೊಳ್ಳಬೇಕು. 50 ವರ್ಷಗಳ ಹಿಂದೆ ವಿಜ್ಞಾನದ ಬಗ್ಗೆ ಹೆಚ್ಚು ಜಾಗ್ರತೆ ಇಲ್ಲದಿದ್ದಾಗ, ದೆಹಲಿ ಕನ್ನಡ ಶಾಲೆಯಲ್ಲಿ ವೈಜ್ಞಾನಿಕ ಕ್ಷೇತ್ರ ಹುಟ್ಟು ಹಾಕಿ, ಪ್ರಯೋಗಾಲಯ ಪ್ರಾರಂಭಿಸಿದ್ದು ಪ್ರಶಂಸನೀಯ ಎಂದು ಹೇಳಿದರು.


ಶಾಲೆಯ ಅಧ್ಯಕ್ಷರಾದ ಶ್ರೀ ಜಿ.ಎಂ. ಲಿಂಗರಾಜುರವರು ಶಾಲೆಯಲ್ಲಿ ತಾವು ಅಧ್ಯಕ್ಷರಾಗಿ ಚುನಾಯಿತರಾಗಿದಾಗಿನಿಂದ, ಸ್ವಲ್ಪು ಭಿನ್ನರೀತಿಯ ಪ್ರಗತಿ ಮತ್ತು ಪ್ರಯತ್ನ ಮಾಡುತ್ತಿದ್ದೇವೆ. ಉತ್ತಮ ಕಾರ್ಯನಿರ್ವಹಿಸಿದ ಶಿಕ್ಷಕರಿಗೆ ಪ್ರತಿ ವರ್ಷ ಉತ್ತಮ ಶಿಕ್ಷಕ/ಶಿಕ್ಷಕಿ ಪ್ರಶಸ್ತಿಗಳ ಘೋಷಣೆ. ಅಂದರೆ ಗುರುಗಳಿಗೂ ಹೆಚ್ಚು ಶ್ರದ್ಧೆಯಿಂದ ಕಲಿಸುವ ಆಸಕ್ತಿ ಬರುತ್ತದೆ. ಅದೇ ರೀತಿ ವಿದ್ಯಾರ್ಥಿಗಳಿಗೂ ಉತ್ತಮ ಫಲಿತಾಂಶ ಪಡೆದವರಿಗೆ, ಅನೇಕ ಪ್ರೋತ್ಸಾಹಕರ ಬಹುಮಾನ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದರು.

ಇನ್ನು ಸ್ಥಳಾವಕಾಶ ತೆಗೆದುಕೊಂಡು ಇನ್ನೊಂದು ಶಾಲೆ ತೆರೆಯುವ ಯೋಜನೆ ಇದೆ. ಮಾಸ್ಟರ್ ಆಫ್ ಕಂಪ್ಯೂಟರ್ ಕೋರ್ಸ್ ಪ್ರಾರಂಭಿಸಿ ಯಶಸ್ಸು ಹೊಂದಿದ್ದನ್ನು ಉದಾಹರಿಸುತ್ತಾ ಕನ್ನಡಿಗರು ಯಾವುದೇ ಕ್ಷೇತ್ರವನ್ನು ಪ್ರಾರಂಭಮಾಡಿದರೂ ಗೆಲುವು ಸಾಧಿಸುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ. ಆದರೆ, ಸ್ವಲ್ಪ ಆರ್ಥಿಕ ಸಹಕಾರ ಪ್ರಾರಂಭ ಹಂತದಲ್ಲಿ ಬೇಕಾಗುತ್ತದೆ. ತಮ್ಮ ಅಧಿಕಾರಾವಧಿಯಲ್ಲಿಯೇ ಅದನ್ನು ಸಾಧಿಸುವ ಆಶೆ ಇದೆ ಎಂದರು. ಈ ಶಾಲೆಯ ಸರ್ವತೋಮುಖ ಉನ್ನತಿಯಲ್ಲಿ ಎಲ್ಲರ ಪಾತ್ರ, ಸಹಕಾರ ಪ್ರಮುಖವಾಗಿದೆ ಹಾಗೂ ಪೂರ್ಣ ವರ್ಷ ಸುವರ್ಣವರ್ಷದ ನಿಮಿತ್ತ ಕಾರ್ಯಕ್ರಮಗಳು ಜರುಗುತ್ತಲೇ ಇರುತ್ತವೆ ಎಂದರು. ವಿಜಯದ ಪಥದತ್ತ ಶಾಲೆ ಮುಂದುವರೆದು ಉತ್ಕರ್ಷಣೆ ಹೊಂದಲಿ ಎಂದರು.

ನಂತರ ಚಂದ್ರಶೇಖರವರು ಶಾಲೆಯ ಅಡಿಪಾಯ ಸಮಾರಂಭದಿಂದ ಇದ್ದು ಅನೇಕ ವಿಶಿಷ್ಟ ಸೇವೆ ಸಲ್ಲಿಸಿದವರು ಈಗ ತಮ್ಮ ಮಧ್ಯದಲ್ಲಿ ಇಲ್ಲದೆ ಕಣ್ಮರೆಯಾಗಿದ್ದಾರೆ. ಅನೇಕ ಹಿರಿಯರು ನಮ್ಮನ್ನಗಲಿ ಹೋದರು. ಅವರು ಮಾಡಿದ ಕಾರ್ಯ ಶ್ಲಾಘನೀಯ ಎಂದು ಅವರೆಲ್ಲರಿಗೆ ನಮನ ಸಲ್ಲಿಸಿದರು. ಶಾಲಾ ಚಟುವಟಿಕೆಗಳ ಕಾರ್ಯವಿಧಾನ ಹಾಗು ಅನೇಕ ಕ್ಷೇತ್ರಗಳಲ್ಲಿ ವಿಶಿಷ್ಟ ಶಿಕ್ಷಣಕೊಟ್ಟು ದಿಲ್ಲಿಯ ಲೋಧಿ ರಸ್ತೆಯಲ್ಲಿರುವ ಈ ಶಾಲೆಯಲ್ಲಿ ಈಗ ಸೇರ್ಪಡೆಯಾಗಲು ಕಷ್ಟಪಟ್ಟು, ಇಷ್ಟಪಟ್ಟು ಬರುತ್ತಿದ್ದಾರೆ. ಎಷ್ಟೊ ಜನರಿಗೆ ಶಿಕ್ಷಣ ಪಡೆಯಲು ಸೀಟು ಸಿಗುವುದಿಲ್ಲ. ಸಾಧಾರಣ 1000 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ ಹಾಗು ಅನೇಕ ಶಿಕ್ಷಕರ ವೃಂದ ಹಾಗು ಇತರ ಎಲ್ಲ ಸಿಬ್ಬಂದಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದು ತೀವ್ರ ಪ್ರಗತಿಪಥದತ್ತ ಸಾಗುತ್ತಿದೆ ಎಂದರು.

ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುದೆಹಲಿ ಕನ್ನಡ ಸಂಘಗಳ ಸದಸ್ಯರು ಎಲ್ಲರೂ ಭಾಗವಹಿಸಿದ್ದರು. ಪ್ರಭಾರಿ ಪ್ರಾಂಶುಪಾಲರಾದ ಶ್ರೀ ಕೆ.ಟಿ. ಗಣೇಶ ಅವರು ವಂದನಾರ್ಪಣೆ ಮಾಡಿದರು. ಬಂದವರೆಲ್ಲರಿಗೂ ಭರ್ಜರಿ ಊಟದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು.

■ **ಡಾ. ಸುಮಂಗಲಾದೇವಿ**



ಕಳೆದ 28 ವರ್ಷಗಳಿಂದ ಹೊರನಾಡಿನಲ್ಲಿ ಕನ್ನಡಾಭಿವೃದ್ಧಿಗೆ ಗಣನೀಯ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ 'ದೆಹಲಿ ಕನ್ನಡಿಗ' ಪತ್ರಿಕೆಯ ಸಂಪಾದಕ ಬಾ. ಸಾಮಗ ಅವರನ್ನು ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ಹಿರಿಯ ಪ್ರಾಧ್ಯಾಪಕ, ಲೇಖಕ ಪ್ರೊ. ಪುಷ್ಪೇಶ್ ಪಂತ್ ಅವರು ನವೆಂಬರ್ 1 ರಂದು ದೆಹಲಿ ಕನ್ನಡಿಗ ಪತ್ರಿಕೆಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಲು ಹೊದಿಸಿ ಸನ್ಮಾನಿಸಿದರು.

## ದೆಹಲಿ ಒಕ್ಕಲಿಗ ಗೌಡ ಸಂಘಕ್ಕೆ ಅಧ್ಯಕ್ಷರಾಗಿ ಡಾ. ಬಿ.ಟಿ. ಚಿದಾನಂದ ಮೂರ್ತಿ ಪುನರಾಯ್ಕೆ



ದೆಹಲಿ ಒಕ್ಕಲಿಗ ಗೌಡ ಸಂಘ ಕಳೆದ ಅಕ್ಟೋಬರ್ 31ರಂದು ಪಿಕ್‌ನಿಕ್‌ನ್ನು ಲೋಧಿ ಗಾರ್ಡನ್‌ನಲ್ಲಿ ಹಮ್ಮಿಕೊಂಡಿತ್ತು. ಇದೇ ಸಂದರ್ಭದಲ್ಲಿ 2010–11ನೇ ಸಾಲಿಗೆ ಕಾರ್ಯಕಾರಿ ಸಮಿತಿಗೆ ಆಯ್ಕೆ ನಡೆಯಿತು.

**ಅಧ್ಯಕ್ಷರು** : ಡಾ. ಬಿ.ಟಿ. ಚಿದಾನಂದ ಮೂರ್ತಿ, **ಉಪಾಧ್ಯಕ್ಷರು** : ಈಶ್ವರ್‌ಚಂದ್ರ ವಿದ್ಯಾಸಾಗರ್, ಸರೋಜಾ ಮಾಧವ, **ಕಾರ್ಯದರ್ಶಿ** : ಅನಂತ ಅರಳಿ, **ಜಂಟೀ ಕಾರ್ಯದರ್ಶಿ** : ಟಿ.ಪಿ. ಬೆಳ್ಳಿಯಪ್ಪ, ಪಿ.ಸಿ. ಶ್ರೀನಿವಾಸ, **ಖಜಾಂಚಿ** : ಸಿ.ಎಂ. ನಾಗರಾಜ. **ಸದಸ್ಯರುಗಳು** : ಭಾರತಿ ನಾಗರಾಜ, ಎ.ಟಿ. ಶ್ರೀನಿವಾಸ್, ಸಾಮ್ರಾಟ್ ಗೌಡ, ಬಿ.ಕೆ. ಸುರೇಶ್, ಹನುಮೇ ಗೌಡ, ಟಿ.ಡಿ. ಮಹೇಶ್



ಕನ್ನಡ ಬಳಗ, ರಾಜೇಂದ್ರ ನಗರದ ಮಾಜಿ ಅಧ್ಯಕ್ಷರಾದ ಶ್ರೀ ಸಿ.ವಿ. ಭಟ್ ಅವರು ತಮ್ಮ ಉದ್ಯೋಗದಿಂದ ಕಳೆದ ದಿನಾಂಕ 30.09.2010ರಂದು ನಿವೃತ್ತರಾಗಿದ್ದಾರೆ. ಅವರ ನಿವೃತ್ತ ಜೀವನವು ಸುಖ–ಸಂತೋಷಗಳಿಂದ ಕೂಡಿರಲಿ, ಪರಮಾತ್ಮನು ಅವರಿಗೆ ಆಯುರಾರೋಗ್ಯವನ್ನು ಕೊಡಲಿ ಎಂದು ಹಾರೈಸುವ ಕನ್ನಡ ಬಳಗ ರಾಜೇಂದ್ರ ನಗರ.

**ಗೋಪಾಲಕೃಷ್ಣ ಭಟ್**


# Saujanya Printing Press

A HOUSE OF QUALITY PRINTING

C-95, Okhla Industrial Area, Phase-I,
New Delhi - 110 020
Phone : 26815778, 41611143
Mobile : 9811104398, 9811604398
e-mail : rvprintingpress@gmail.com / hpgp2006@gmail.com

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ದೆಹಲಿ ಕನ್ನಡ ಲೇಡಿಸ್ ಕ್ಲಬ್‌ಗೆ ೩೦ರ ಸಂಭ್ರಮ

೧೯೮೦ರ ದಶಕದಲ್ಲಿ ದೆಹಲಿಯ ಸಫ್ದರ್‌ಜಂಗ್‌ನ ಸುತ್ತಮುತ್ತ ನೆಲೆಸಿದ್ದ ಕನ್ನಡ ಮಹಿಳೆಯರು ಪ್ರತಿ ತಿಂಗಳು ಒಬ್ಬೊಬ್ಬರ ಮನೆಯಲ್ಲಿ ಮನೋರಂಜನೆಗಾಗಿ ಸೇರುತ್ತಿದ್ದ ಈ ಸಣ್ಣ ಗುಂಪು ಕ್ರಮೇಣ ದೊಡ್ಡದಾಗಿ ಬೆಳೆದು, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳ ವಿನಿಮಯ ನಡೆಸುತ್ತಿದ್ದರು. ೩೦ ಸಂವತ್ಸರಗಳನ್ನು ದಾಟುತ್ತಿರುವ ಈ ಗುಂಪು ಹಲವಾರು ಉತ್ಸಾಹಿ ಸದಸ್ಯರ ಶ್ರಮದಿಂದ ಹೆಮ್ಮರವಾಗುತ್ತಿರುವುದು ನಮ್ಮೆಲ್ಲರಿಗೂ ಸಂತೋಷ ಮತ್ತು ಹೆಮ್ಮೆಯ ವಿಷಯ. ಚಿಕ್ಕದಾಗಿ ಮನೆಗಳಲ್ಲಿ ಪ್ರಾರಂಭವಾದ ಈ ಸಣ್ಣ ಸಂಘದ ಮುಖ್ಯ ಸದಸ್ಯರುಗಳನ್ನು ನೆನೆಸಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

೧೯೮೨ರಲ್ಲಿ ಶ್ರೀಮತಿ ಅಂಬಳೆಯವರು ಮೊದಲ ಅಧ್ಯಕ್ಷೆಯಾಗಿ ಚುನಾಯಿತರಾದರು. ಇವರು ಬೇಕಿಂಗ್‌ನಲ್ಲಿ ಪರಿಣಿತರು. ಈ ಕ್ಲಬ್‌ನ್ನು ಪ್ರಾರಂಭಿಸುವುದರಲ್ಲಿ ಸಂಗೀತ ವಿದೂಷಿ ಡಾ. ಸುಧಾಚಾರ್, ಮತ್ತೊಬ್ಬ ಗಾಯಕಿ ಸರಸ್ವತಿ ಪಾರ್ಥಸಾರಥಿ, ಪ್ರಮೀಳಾರಾವ್, ವಿಮಲಾ ಮೂರ್ತಿ, ವಿಜಯ ಶಿವಪ್ರಸಾದ್, ಸಾವಿತ್ರಿ ಜಯಗೋಪಾಲ್, ವಸುಮತಿ, ಗೀತಾ ರಮಾನಂದ, ಲೀಲಾ ಶ್ರೀನಿವಾಸಾಚಾರ್, ವಸುಂಧರ, ಶಾಂತಾ ರಾಮರಾವ್, ಸರಳಾಮೂರ್ತಿ, ಸೀತಮ್ಮ ಅಯ್ಯಂಗಾರ್, ಪದ್ಮಜ ಶ್ರೀನಿವಾಸ್, ಸಾವಿತ್ರಿ ಭಟ್, ಹೇಮಾ ಗೋಕಾಕ್, ರಮಾ ಚಂದ್ರಶೇಖರ್, ಲಕ್ಷ್ಮಿ ಸುಬ್ಬಯ್ಯ, ಲಲಿತಾ ಶ್ರೀನಿವಾಸ, ವಿಜಯ ವಿಶ್ವೇಶರ್, ಜಯಾರಾಜನ್, ಸುಮಿತ್ರರಾವ್, ರಮಾ ಭಾಸ್ಕರ್, ಶಶಿ ರಾವ್, ಪ್ರಭಾ ರಾಮಸ್ವಾಮಿ, ರಂಗಮಣಿ ರಾವ್, ಕಾಂತಿ ಅಕ್ರೆ, ಲಲಿತಾ ನಾಗರಾಜ್, ಸುಲೇಖಾ ಉಪಾಧ್ಯಾಯ, ಮಾಲತಿರಾಜ್, ರಾಧಾ ಕೌಜಲಗಿ, ಸುಗುಣಾ ಕೃಷ್ಣನ್, ಶಕುಂತಲಾ ಪಾಲನ್, ಸುಗುಣಾ ನಾಗೇಶ್, ರಾಜೇಶ್ವರಿ ಕಲ್ಲೂರು, ಗೀತಾ ಹವಾಲ್ದಾರ್, ಪದ್ಮ ವಿಶ್ವನಾಥ್, ಲತಾ ನರೇಂದ್ರ ಹೀಗೆ ಮುಂತಾದವರು ಪದಾಧಿಕಾರಿಗಳಾಗಿ ಕಾರ್ಯ ನಿರ್ವಹಣೆ ನಡೆಸಿಕೊಂಡು ಬಂದರು.

ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿ ಹಲವು ವರ್ಷ ದುಡಿದು ಕರ್ನಾಟಕ ಸಂಘವನ್ನು ಬೆಳೆಸಿದ ದಿವಂಗತ ಕೆ.ಆರ್. ನಾಗರಾಜ್ ಅವರು ಈ ಮಹಿಳೆಯರಿಗೆ ಸಂಘದ ಬೇಸ್‌ಮೆಂಟ್‌ನಲ್ಲಿ ಮಹಿಳಾ ಕ್ಲಬ್ಬನ್ನು ನಡೆಸಲು ಅವಕಾಶ ಮಾಡಿಕೊಟ್ಟದ್ದರಿಂದ ನಮ್ಮ ಕ್ಲಬ್ ಅವರಿಗೆ ಚಿರಋಣಿಯಾಗಿದೆ.

ಶ್ರೀಮತಿ ಸುಧಾಚಾರ್ ಅವರು ಟಿ.ವಿ. ಮತ್ತು ರೇಡಿಯೋ ಕಲಾವಿದರು. ಇವರು ಸಂಗೀತ ಮತ್ತು ಶ್ಲೋಕಗಳನ್ನು ಕಲಿಸುತ್ತಿದ್ದರು. ಸರಸ್ವತಿ ಪಾರ್ಥಸಾರಥಿಯವರೂ ಕೂಡ. ಕರ್ನಾಟಕ ಸಂಘದ ಕಾರ್ಯಕ್ರಮಗಳಿಗೆ ಭಾವಗೀತೆ, ಜಾನಪದ ಗೀತೆಗಳನ್ನು ಪ್ರಸ್ತುತಿಗೆ ಶಿಷ್ಯರನ್ನು ತಯಾರು ಮಾಡುತ್ತಿದ್ದರು. ಪ್ರಭಾರಾಮಸ್ವಾಮಿ, ಲಲಿತಾ ಶ್ರೀನಿವಾಸ್, ಪದ್ಮ ವಿಶ್ವನಾಥ್ ವೀಣಾ ಕಾರ್ಯಕ್ರಮಗಳನ್ನು ನೀಡುತ್ತಿದ್ದರು. ತಿಂಗಳಿಗೊಮ್ಮೆ ಹೊಸ ಹೊಸ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

೧೯೮೩ : ಕ್ಲಬ್ ಸದಸ್ಯೆಯರಿಂದ ಬಟ್ಟೆಗಳ ಮೇಲೆ ಬಣ್ಣಗಳಿಂದ ಚಿತ್ರ ಬಿಡಿಸುವುದು

೧೯೮೩-೮೪ : ಕೇಶವಿನ್ಯಾಸ ಸ್ಪರ್ಧೆ, ಪಾಕ ಕಲೆ ಸ್ಪರ್ಧೆ

೧೯೮೫-೮೬ : ರಂಗೋಲಿ ಹಾಕುವ ಸ್ಪರ್ಧೆ

೧೯೮೭-೮೮ : ಆಟೋಟ ಸ್ಪರ್ಧೆ

೧೯೮೯-೯೦ : ಕರ್ನಾಟಕದಿಂದ ಬಂದ ಕಲಾವಿದರ ಸಂಗೀತ ಕಾರ್ಯಕ್ರಮ

೧೯೯೧-೯೨ : "ಸೆಂಟ್ರಲ್ ಸೋಷಿಯಲ್ ವೆಲ್‌ಫೇರ್ ಬೋರ್ಡ್"ನವರು ಆಯೋಜಿಸಿದ್ದ ಮಹಿಳಾ ಮೇಳದಲ್ಲಿ ಭಾಗವಹಿಸಿ, ಕರ್ನಾಟಕದ ವಿಶೇಷ ತಿಂಡಿ ತಿನಿಸುಗಳು ಮಸಾಲೆ ಪುಡಿಗಳು, ಚಿತ್ರಕಲೆ, ಕಸೂತಿ ಕೆಲಸಗಳ ಸ್ಟಾಲ್ ಹಾಕಿ, ಸಂಜೆ ಒಡಿಸ್ಸಿ ನೃತ್ಯ ಏರ್ಪಡಿಸಿ, ಶ್ರೀಮತಿ ಮೋಹಿನಿ ಗಿರಿಯವರಿಂದ ಪ್ರಶಂಸೆ ಪಡೆದಿತ್ತು.

**೧೯೯೪- ಫೆಬ್ರವರಿ ೨ರಿಂದ ೧೯**

(ಎ) ಕರ್ನಾಟಕ ಸರ್ಕಾರ ಆಯೋಜಿಸಿದ 'ಸೂರಜ್ ಕುಂಡ ಮೇಳ'ದಲ್ಲಿ ಭಾಗವಹಿಸಿ, ಕರ್ನಾಟಕ ರಾಜ್ಯದ ಮುಖ್ಯ ದ್ವಾರವನ್ನು ತಳಿರು ತೋರಣ, ಹೂವುಗಳಿಂದ ಅಲಂಕರಿಸಿ, ರಾಜ್ಯದ ನಕ್ಷೆಯನ್ನು ಸುಂದರವಾಗಿ ಹೂವು, ಎಲೆಗಳು ಮತ್ತು ರಂಗೋಲಿಯಿಂದ ಅಲಂಕರಿಸಿ, ಆಗಿನ ಕೇಂದ್ರ ಗೃಹ ಮಂತ್ರಿಗಳಾಗಿದ್ದ ಶ್ರೀ ವೈ.ಬಿ. ಚಾವ್ಹಾಣರು ಮತ್ತು ಶ್ರೀಮತಿ ಮಾರ್ಗರೇಟ್ ಆಳ್ವರಿಂದ ಪ್ರಶಂಸೆ ಪಡೆಯಿತು.

(ಬಿ) ಫೆಬ್ರವರಿಯಲ್ಲಿ ತಾಲ್‌ಕಟೋರ ಸ್ಟೇಡಿಯಂನಲ್ಲಿ ನಡೆದ ಆದಿವಾಸಿ ಮಹಿಳಾ ಮೇಳದಲ್ಲಿ ಭಾಗವಹಿಸಿದ್ದು.

(ಸಿ) ನವೆಂಬರ್ ೧೮ ರಿಂದ ೨೫ ಜವಾಹರಲಾಲ್ ಸ್ಟೇಡಿಯಂನಲ್ಲಿ ನಡೆದ 'ರಾಷ್ಟ್ರೀಯ ಮಹಿಳಾ ಮೇಳ'ದಲ್ಲಿ ಭಾಗವಹಿಸಿದ್ದು, ಪ್ರಶಂಸೆಗೆ ಪಾತ್ರವಾಗಿತ್ತು.

ಮತ್ತಿತರ ಕಾರ್ಯಕ್ರಮಗಳು

ಸಂಗೀತ ವಿದೂಷಿ ಸುಕನ್ಯಾ ಪ್ರಭಾಕರ ಅವರ ಸುಶ್ರಾವ್ಯ ಸಂಗೀತ ಕಾರ್ಯಕ್ರಮ ಮೈಸೂರಿನ ಆರ್.ಆರ್. ಪದ್ಮನಾಭರಿಂದ ವೀಣಾವಾದನ.

ಶ್ರೀಮತಿ ಅನುಪಮಾ ಸೇಠಿಯವರಿಂದ ಆರೋಗ್ಯದ ಬಗ್ಗೆ ಸಲಹೆ.

ಡಾ. ಶಕುಂತಲ ದೇವೇಸರ್ ಅವರಿಂದ ಶಾರೀರಿಕ ತೊಂದರೆ ಮತ್ತು ಆರೋಗ್ಯದ ಬಗ್ಗೆ ಸಲಹೆ.

ಶ್ರೀಮತಿ ಉಮಾ ಸಿಂಘಾನಿಯವರಿಂದ-ಹರ್ಬಲ್ ಬ್ಯೂಟಿ ಕೇರ್ ಟಿಪ್ಸ್.

ಶ್ರೀಮತಿ ಶೈಲಜಾ ಭಟ್ ಅವರಿಂದ ಪ್ರಕೃತಿ ಚಿಕಿತ್ಸೆ ಉಪನ್ಯಾಸ.

ಒರಿಫ್ಲೇಮ್ ಸೌಂದರ್ಯ ಪ್ರಸಾದನ ಬಗ್ಗೆ ತಿಳುವಳಿಕೆ.

ಮೋದಿ ರಬ್ಬರ್ ಅವರಿಂದ ಅದರ ಉಪಯೋಗ ವಸ್ತುಗಳ ಪ್ರದರ್ಶನ

1. ಪ್ರತಿ ವರುಷ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುವ ವಾರ್ಷಿಕೋತ್ಸವ ಮತ್ತು ಅಲ್ಲಿ ನಡೆಯುವ ವಿಶೇಷ ಕಾರ್ಯಗಳಲ್ಲಿ ಸ್ವಯಂಸೇವಕರಾಗಿ ಸಹಕರಿಸುವುದು.
2. ಬಿ.ಕೆ. ಸಾಮಗರು ಪ್ರತಿ ವರುಷ ನಡೆಸುವ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸುವುದು.
3. ಪ್ರಧಾನ ಮಂತ್ರಿಗಳ ಪರಿಹಾರ ಧನಕೋಶ ಸಂಚಯಕ್ಕೆ ಅವಶ್ಯಕ ಸಾಮಾನುಗಳು, ಹಣವನ್ನು ಶೇಖರಿಸಿ ಕೊಡುವುದು, ಲಾತೂರ ಮತ್ತು ಗುಜರಾತ ಭೂಕಂಪ, ಒರಿಸ್ಸಾ ಪ್ರವಾಹದ ಪರಿಹಾರ, ಕಾರ್ಗಿಲ್ ಫಂಡ್, ಜಮ್ಮು ಮತ್ತು ಕಾಶ್ಮೀರ, ದೆಹಲಿ ಭೂಕಂಪ, ತ್ಸುನಾಮಿ-ಧನ ಸಹಾಯ, ಔಷಧಿ, ಬಟ್ಟೆ ಮತ್ತು ತಿನಿಸುಗಳ ಸಹಾಯ.
4. ದೆಹಲಿ ಕನ್ನಡ ಶಾಲೆಯ ಅತ್ಯಂತ ಅವಶ್ಯಕತೆಯಿರುವ ಮಕ್ಕಳಿಗೆ (ಸೀಮಿತವಾಗಿ) ಪುಸ್ತಕ, ಫೀಸ್, ಯುನಿಫಾರ್ಮ್‌ಗೆ ಪ್ರತಿ ವರ್ಷ ಹಣ ಕೊಡುವುದು. ಪ್ರತಿ ವರ್ಷ ಮಹಿಳಾ ಸದಸ್ಯೆಯರು, ಯಾತ್ರಾಸ್ಥಳ, ಐತಿಹಾಸಿಕ ಹಾಗು ವಿಹಾರ ಸ್ಥಳಗಳಿಗೆ ಹೋಗುವುದು.
5. ಪ್ರತಿವರ್ಷವೂ ನ್ಯಾಶನಲ್ ಬ್ಲೈಂಡ್ ಸ್ಕೂಲ್‌ನಲ್ಲಿ 'ಲಯನ್ಸ್ ಕ್ಲಬ್'ನವರ ಜೊತೆ ಸೇರಿ ಸುಮಾರು ೪೦೦-೫೦೦ ಹುಡುಗ-ಹುಡುಗಿಯರಿಗೆ ಆರೋಗ್ಯ ಶಿಬಿರ ಏರ್ಪಡಿಸಿ, ತಜ್ಞವೈದ್ಯರು ಮತ್ತು ಮನೋವೈದ್ಯರನ್ನು ಕರೆಸಿ, ದೆಹಲಿ ಕನ್ನಡ ಲೇಡಿಸ್ ಕ್ಲಬ್‌ನ ಸದಸ್ಯೆಯರು ಸ್ವಯಂಸೇವಕರಾಗಿ ಸೇವೆ ನಡೆಸುತ್ತಿರುವುದು ಗಮನೀಯ.
6. ಸಾಮೂಹಿಕ ಗಣೇಶ ಪೂಜೆ, ರಾಮನವಮಿ, ಯುಗಾದಿ, ಸಂಕ್ರಾಂತಿ, ಸತ್ಯನಾರಾಯಣ ಪೂಜೆ ಆಚರಿಸುವುದು.
7. ಇತ್ತೀಚೆಗೆ ದಾಖಲಾತಿಯಾದ ನಮ್ಮ ದೆಹಲಿ ಕನ್ನಡ ಲೇಡಿಸ್ ಕ್ಲಬ್ ಈಗ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ (ರಿ) ಆಗಿದೆ.

**ಇದೇ ಡಿಸೆಂಬರ್ ೫ ನೇ ತಾರೀಖು, ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ೩೦ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಎಲ್ಲರಿಗೂ ಸುಸ್ವಾಗತ.**

**■ ಸುಮಿತ್ರಾ ರಾವ್**

# ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ವಿಜೇತರಿಗೆ ರಾಜ್ಯ ಸರ್ಕಾರದ ವತಿಯಿಂದ ಸನ್ಮಾನ



57ನೇಯ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಸ್ವೀಕರಿಸಲು ನವದೆಹಲಿಗೆ ಆಗಮಿಸಿದ್ದ ಪ್ರಶಸ್ತಿ ವಿಜೇತ ಚಿತ್ರರಂಗದ ಗಣ್ಯರನ್ನು ರಾಜ್ಯ ಸರ್ಕಾರದ ನವದೆಹಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್ ಅವರು ರಾಜ್ಯ ಸರ್ಕಾರದ ಪರವಾಗಿ ಕರ್ನಾಟಕ ಭವನದಲ್ಲಿ ಆತ್ಮೀಯವಾಗಿ ಸನ್ಮಾನಿಸಿದರು.

ಕನ್ನಡ ಚಿತ್ರರಂಗ ರಾಷ್ಟ್ರೀಯ ಮಟ್ಟದಲ್ಲಿ ಛಾಪನ್ನು ಮೂಡಿಸಿ, ಇತರೆ ಭಾಷೆಯ ಚಿತ್ರಗಳಿಗಿಂತ ಅತ್ಯುತ್ತಮ ಚಿತ್ರಗಳನ್ನು ನಿರ್ಮಿಸುವುದರ ಜೊತೆಗೆ ಪ್ರಶಸ್ತಿಗಳನ್ನು ಪಡೆಯುತ್ತಿರುವುದು ಸಂತಸದ ವಿಷಯ. ಮುಂಬರುವ ವರ್ಷಗಳಲ್ಲೂ ಹೆಚ್ಚಿನ ಸಾಧನೆ ಮಾಡಲಿ ಎಂದು ಪ್ರಶಸ್ತಿ ವಿಜೇತರನ್ನು ಸನ್ಮಾನಿಸಿ ಬೈಕೆರೆ ಶುಭ ಹಾರೈಸಿದರು.

ಸಮಾರಂಭದಲ್ಲಿ ಅತ್ಯುತ್ತಮ ಮಕ್ಕಳ ಚಿತ್ರ ವಿಭಾಗದಲ್ಲಿ ಸ್ವರ್ಣ ಕಮಲ ಪ್ರಶಸ್ತಿ ಪಡೆದ "ಪುಟಾಣಿ ಪಾರ್ಟಿ" ಚಿತ್ರದ ನಿರ್ದೇಶಕ ಪಿ.ಎನ್. ರಾಮಚಂದ್ರ, ಶ್ರೇಷ್ಠ ಸಿನಿಮಾಕೃತಿಗೆ ಸ್ವರ್ಣಕಮಲ ಪ್ರಶಸ್ತಿ ಪಡೆದ "ಸಿನಿಮಾಯಣ" ಲೇಖಕ ಕೆ. ಪುಟ್ಟಸ್ವಾಮಿ, ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ ವಿಭಾಗದಲ್ಲಿ ರಜತಕಮಲ ಪ್ರಶಸ್ತಿ ಪಡೆದ "ಕನಸೆಂಬ ಕುದುರೆಯನ್ನೇರಿ" ಚಿತ್ರದ ನಿರ್ಮಾಪಕ ಬಸಂತಕುಮಾರ್ ಪಾಟೀಲ್, ನಿರ್ದೇಶಕ ಗಿರೀಶ್ ಕಾಸರವಳ್ಳಿ, ಅತ್ಯುತ್ತಮ ಚಿತ್ರಕಥಾಕ್ಕೆ ರಜತಕಮಲ ಪ್ರಶಸ್ತಿ ಪಡೆದ "ಕನಸೆಂಬ ಕುದುರೆಯನ್ನೇರಿ" ಚಿತ್ರದ ಚಿತ್ರಕಥಾ ಲೇಖಕ ಗೋಪಾಲಕೃಷ್ಣ ಪೈ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಸನ್ಮಾನ ಮತ್ತು ಔತಣಕೂಟ ಸ್ವೀಕರಿಸಿದ ಬಳಿಕ ಮಾತನಾಡಿದ ಪ್ರಶಸ್ತಿ ವಿಜೇತರು, ನಮ್ಮ ಸಾಧನೆಯಲ್ಲಿ ರಾಜ್ಯ ಸರ್ಕಾರದ ಪ್ರೋತ್ಸಾಹ ಕೂಡ ಪ್ರಮುಖವಾದದ್ದು, ಚಿತ್ರರಂಗಕ್ಕೆ ಪ್ರೋತ್ಸಾಹ ಧನ ನೀಡುವುದರ ಜೊತೆಗೆ ಚಿತ್ರರಂಗದ ಎಲ್ಲಾ ಕಾರ್ಯಕ್ರಮಗಳಿಗೂ ರಾಜ್ಯ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಇದು ನಮಗೆ ಸಂತಸ ತಂದಿದೆ. ಮುಂದಿನ ದಿನಗಳಲ್ಲೂ ರಾಜ್ಯ ಸರ್ಕಾರ ಚಿತ್ರರಂಗವನ್ನು ಪ್ರೋತ್ಸಾಹಿಸಲಿ ಎಂದು ವಿಜೇತರು ಅಭಿಪ್ರಾಯ ವ್ಯಕ್ತಪಡಿಸಿದರು.

## ಉಚಿತ ವೈದ್ಯಕೀಯ ತಪಾಸಣೆ

**ನವೆಂಬರ್ ತಿಂಗಳ 28ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.**

**■ ಪ್ರಧಾನ ಕಾರ್ಯದರ್ಶಿ**

## ಓದುಗರ ಪತ್ರ

ಅಕ್ಟೋಬರ್ ತಿಂಗಳ ಅಭಿಮತದ ಮುಖಪುಟದಲ್ಲಿ ರಾರಾಜಿಸುತ್ತಿರುವ ಸ್ಥಿರ ಕಾರುಣ್ಯನೋಟದ ಗಣೇಶ. ಜೊತೆಗೆ ನಮ್ಮ ಅಭಿಮತಕ್ಕೆ 21ರ ಪ್ರಾಯ. ಗಣೇಶನಿಗೆ 21 ತುಂಬಾ ಇಷ್ಟವಾದ ಸಂಖ್ಯೆ. ಅವನಿಗೆ 21 ಮೋದಕಗಳು. ಸ್ವೀಕರಿಸಿ ಮುದ ನೀಡುವ ಗಣೇಶ.

1988ರ ಡಿಸೆಂಬರ್‌ನಿಂದ 2000ದ ಡಿಸೆಂಬರ್ ರವರೆಗೆ ಹೊಸ ದೆಹಲಿಯಲ್ಲಿ ವಾಸವಾಗಿದ್ದ ನನಗೆ ದೆಹಲಿ ಕರ್ನಾಟಕ ಸಂಘ ಕೊಟ್ಟ ಪ್ರೋತ್ಸಾಹ ಗಮನಾರ್ಹ. ದೆಹಲಿ ಕರ್ನಾಟಕ ಸಂಘಕ್ಕೆ ನಾ ಎಂದಿಗೂ ಋಣಿಯೇ ಸರಿ.

ಈ ಸಲದ ಸಂಚಿಕೆಯಲ್ಲಿ ಶ್ರೀ ಸಖಾರಾಂ ಉಪ್ಪೂರು ಅವರ 'ದೆಹಲಿಯಲ್ಲಿ ಕನ್ನಡ ರಂಗಭೂಮಿ ಒಂದು ಅವಲೋಕನ' ಈ ಲೇಖನದಲ್ಲಿ ನನ್ನ ಸೇವೆಗೂ ಮಾನ್ಯತೆ ನೀಡಿ, ನನ್ನನ್ನು ನೆನಪು ಮಾಡಿಕೊಂಡಿದ್ದಾರೆ. ಬರೆದವರಿಗೆ, ಪ್ರಕಟಿಸಿದವರಿಗೆ ನನ್ನ ಕೃತಜ್ಞತೆಗಳು.

ಈ ಸಲದ ಸಂಚಿಕೆ ನೋಡಿದಾಗ ಮನಸ್ಸಿಗೆ ಹಬ್ಬದ ಅನಿಸಿಕೆ ಜನಿಸಿದೆ. ಕಡೇ ಪುಟದಲ್ಲಿ ಗಣಪತಿ ವಿಸರ್ಜನೆ ಚಿತ್ರ ಹಾಕಿರುವುದು ಅತ್ಯಂತ ಸೂಕ್ತ.

2004ರಲ್ಲಿ ಹೊಸ ದೆಹಲಿಗೆ ಬಂದಿದ್ದೆ. ಎಲ್ಲರನ್ನು ಒಮ್ಮೆ ನೋಡಬೇಕೆನಿಸುತ್ತಿದೆ. ಭಗವಂತ ನನಗೆ ಅವಕಾಶ ನೀಡಲಿ. ಎಲ್ಲರಿಗೂ 'ದೀಪಾವಳಿ' ಹಬ್ಬದ ಶುಭಾಶಯಗಳು.

**■ ಕೆ.ಎಂ. ಮಧ್ವರಾಯ, ಬೆಂಗಳೂರು**

ಮಹಾಗಣಪತಿಯನ್ನು ಹಾರಾಲಂಕಾರಗಳಿಂದ ಶೃಂಗರಿಸಿ ಮುಂದಿಟ್ಟುಕೊಂಡು ತನ್ನ ಇಪ್ಪತ್ತೊಂದನೆಯ ವರ್ಷಾರಂಭದ ಪ್ರಥಮ ಸಂಚಿಕೆಯಾಗಿ ಕಾಣಿಸಿಕೊಂಡ 'ಅಭಿಮತ' ಸಾಹಿತ್ಯಾಸಕ್ತರನ್ನು ಮುಕ್ತ ಮನದಿಂದ ತನ್ನೆಡೆಗೆ ಸೆಳೆದು ಓದಿಸಿಕೊಳ್ಳುವುದು. ಪ್ರಾಕೃತಿಕ ಅಡ್ಡಿ ಆತಂಕಗಳಿಂದಾದ ಇತ್ತೀಚೆಗಿನ ದೇಶೀಯ ವಿದ್ಯಮಾನಗಳಲ್ಲಿ ಸಂಭವಿಸಿದ ಆಕಸ್ಮಿಕ ಆಭಾಸಗಳ ಬಗ್ಗೆ ನಿಮ್ಮೊಂದಿಗೆ ಅಂಕಣದಲ್ಲಿ ಸೂಕ್ತ ಘಟನೆಗಳ ವಿಶ್ಲೇಷಣ ಬರಹ ನೀಡಿದ ಸಂಪಾದಕ ವಸಂತ ಶೆಟ್ಟಿ ಬೆಳ್ಳಾರೆ ಭಿನ್ನ ಮತಸ್ಥರು ಬೆನ್ನು ತಿರುಗಿಸುವ ಹಾಗೆಯೇ ಆಗಿದೆ. ಕನ್ನಡ ಭಾಷೆಯ ಉಳಿವು ಅಳಿವು ಎಂಬ ಕುರಿತು ಡಿಲ್ಲಿಯನ್ನು ಕೇಂದ್ರೀಕರಿಸಿ ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ ಚಿಂತನೆಗೆ ನಮ್ಮನ್ನೂ ಸೇರಿಸಿಕೊಂಡಿದ್ದಾರೆ, ಡಾ. ವೆಂಕಟಾಚಲ ಹೆಗಡೆ, ಸಖಾರಾಮ ಉಪ್ಪೂರು, ಬಾಲಕೃಷ್ಣ ನಾಯ್ಕ್.ಡಿ., ಕೃಷ್ಣಮೂರ್ತಿ ಕಲುಮಂಗಿಯವರ ವೈಚಾರಿಕ ಲೇಖನಗಳು ಗಮನ ಸೆಳೆದರೆ, ನುಡಿ ನಮನಗಳಾಗಿ ಮೂಡಿದ ಬರಹಗಳು ಕಂಬನಿ ಮಿಡಿದವು. ಒಟ್ಟಿನಲ್ಲಿ ಇಡೀ ಸಂಚಿಕೆ ಕಾದಿರಿಸಿಕೊಳ್ಳುವಂತೆ ತೋರಿ ಬಂದುದು ಯತಾರ್ಥ. ಅಭಿನಂದನೆಗಳು.

**■ ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಕಾಸರಗೋಡು**

# Every City is My City!

with

**KBL Multi Branch Banking**

Operate your account across the country

**KBL Multi City Cheque**

Reach your account from anywhere in the country




Karnataka Bank Ltd.
Your Family Bank. Across India.

Regd. & Head Office: Mangalore - 575 002

E-mail: info@ktkbank.com Visit us at: www.karnatakabank.com

Delhi Karnataka Sangha's Abhimatha Monthly,
Nov-2010, Price Rs.1/- RNI Regn. No. 53405/91, DL-SW-15/4016/10-11-12
Printout Date : November 8th / 9th, Postal Date :10th / 11th, Total Pages-20

# Central Council for Research in Yoga & Naturopathy

(Deptt. of AYUSH, Min. of Health & F.W., Govt. of India)
61-65, Institutional Area, Opp. 'D' Block, Janakpuri, New Delhi - 110 058
Tel: 011-28520430, 31, 32; Fax: 28520435
email : ccryn.goi@gmail.com website : www.ccryn.org

Central Council for Research in Yoga & Naturopathy being an apex body in the field of Yoga and Naturopathy is actively engaged in research, development, promotion, propagation, education, training and publication in these fields.

**Grant-in-aid for Clinical and Literary Research**

- 100% Grant-in-aid is given to Yoga & Naturopathy Institutes for conducting research.
- Financial assistance is provided for translation, publication of ancient Yoga texts and other useful standard literature based on modern scientific research.

**Grant-in-aid for TCPC and PCC**

- More than 140 Yoga & Naturopathy hospitals all over India including the remotest areas, tribal areas and North Eastern Regions are given financial assistance under Treatment-cum-Propagation Centre (30 Bed Hospital) and Patient Care Centre (20 & 10 Bed Hospital).
- Financial assistance to Yoga & Naturopathy Institutions for conducting Workshop/Conference/Seminar.

**Central Research Institute (CRI)**

- Free land has been taken over from the Government of Karnataka, Haryana and Manipur for 100 Beds Research Hospital and construction is under progress.
- Active negotiations and consideration is going on with the government of Tamil Nadu, Bihar, Jharkahand and Assam.

**Fellowship for Ph.D. Scholars since 2006**

- Fellowship is given to the students pursuing Ph.D. in the field of Yoga & Naturopathy.
- At present, 10 scholars are being granted Rs. 6000/- per month for 3 years.

**Paramedical Diploma in Naturopathy & Yoga Therapy (DNYT) - 2 Years + 6 Months Training**

- The yearly financial assistance for the course is Rs 5.00 Lakh,
- The Council proposes introduction of the Course in 30 institutions.

**Scholarship to the BNYS (Bachelor of Naturopathy and Yogic Sciences) students:**

- The monthly scholarship of Rs.5000/- will be given to the 110 students from the first year for pursuing the Course outside their State.

**Publications**

- 12 books in Hindi & English.
- CDs on Naturopathy & Yoga Therapy in Hindi, English and Tamil.
- 12 Research Monographs.
- More than 30 brochures, leaflets and booklets in Hindi and English for free distribution.
- Yogic Prakritik Jeevan, quarterly magazine, in English and Hindi.

**Yoga & Naturopathy OPDs**

- Safdarjung Hospital, New Delhi
- RML Hospital, New Delhi
- Lady Hardinge Medical College, New Delhi
- University College of Medical Sciences,Shahadra, Delhi
- B.D. Sharma Post Graduate Institute of Medical Sciences, Rohtak, Haryana
- Ch. Brahm Prakash Ayurvedic Charak Sansthan, Khera Dabar, Najafgarh, Delhi
- Council's HQs

**Yoga Fitness Classes at Delhi :** Headquarters - 6, Udyog Bhawan - 2, AIIMS - 4

**Other Achievements**

- The Council has organized several All India level Seminars/Workshops on Yoga & Naturopathy.
- It is actively participating in various Arogyas and Health Melas.

**(Prof. Dr. B.T. Chidananda Murthy)**
Director

Editor: Vasantha Shetty Bellare, Printed & Published by R. Renu Kumar, General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at R.V. Printing Press, C-97, Okhla Industrial Area, Phase-I, New Delhi-110020, Tel: 26815778, 40545298,